ಹಸ್ತಪ್ರತಿಶಾಸ್ತ್ರ ವಿಭಾಗದ ವತಿಯಿಂದ 2018–2019ನೇ ಶೈಕ್ಷಣಿಕ ಸಾಲಿನಲ್ಲಿ ದಿನಾಂಕ: 16.10.2018ನೇ ಮಂಗಳವಾರ ಕಸಂವಿ, ಸಭಾಂಗಣದಲ್ಲಿ ಒಂದು ದಿನದ ಕಾರ್ಯಗಾರ ನಡೆಯಿತು. ಕಾರ್ಯಗಾರವು ಹಸ್ತಪ್ರತಿಶಾಸ್ತ್ರ ಅಧ್ಯಯನ ಮತ್ತು ಸಂರಕ್ಷಣೆ ಕುರಿತಾಗಿ ನಡೆಯಿತು. ಈ ಕಾರ್ಯಗಾರವನ್ನು ' 'ಶಾರದಾನಮನಮ್' ಎಂದು ಕರೆಯಲಾಯಿತು. ಕಾರ್ಯಗಾರವನ್ನು ವಿಶ್ವವಿದ್ಯಾಲಯದ ಗೌರವಾನ್ವಿತ ಕುಲಪತಿಗಳಾದ ಪ್ರೊ. ಪದ್ಮಾಶೇಖರ್ ಅವರು ಉದ್ಘಾಟಿಸಿದರು, ಕಾರ್ಯಕ್ರಮದ ಅಧ್ಯಕ್ಷರಾಗಿ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಾದ ಪ್ರೊ. ವ್ಹಿ. ಗಿರೀಶಚಂದ್ರ ರವರು ಉಪಸ್ಥಿತರಿದ್ದರು. ನಿವೃತ್ತ ಕನ್ನಡ ಪ್ರಾಧ್ಯಾಪಕರೂ ಹಸ್ತಪ್ರತಿಶಾಸ್ತ್ರಜ್ಞರೂ ಆದ ಡಾ. ಗೀತಾಚಾರ್ಯರವರು ಹಸ್ತಪ್ರತಿಶಾಸ್ತ್ರದ ಅಧ್ಯಯನ ಮತ್ತು ಮಹತ್ವದ ಕುರಿತಾಗಿ ವಿಶೇಷೋಪನ್ಯಾಸ ನೀಡಿದರು. ಕೆಳದಿ ಪ್ರಾಚ್ಯವಸ್ತು ಸಂಗ್ರಹಾಲಯದ ಅಸಿಸ್ಟೆಂಟ್ ಕ್ಯುರೇಟರ್ ಆದ ಡಾ. ಜಿ.ವಿ.ಕಲ್ಲಾಪುರರವರು ಹಸ್ತಪ್ರತಿಗಳ ಸಂರಕ್ಷಣೆ ಕುರಿತು ವಿಶೇಷೋಪನ್ಯಾಸ ನೀಡಿದರು. ಸಮಾರೋಪ ಸಮಾರಂಭದಲ್ಲಿ ಡಾ. ವೀರನಾರಾಯಣ ಪಾಂಡುರಂಗೀಯವರು ಅಧ್ಯಕ್ಷರಾಗಿ ಹಾಗೂ ವಿಶ್ವವಿದ್ಯಾಲಯದ ಹಣಕಾಸು ಅಧಿಕಾರಿಗಳಾದ ವಿದ್ವಾನ್ ಪ್ರಕಾಶ ಆರ್ ಪಾಗೋಜಿಯವರು ಉಪಸ್ಥಿರಿದ್ದರು. ಹಸ್ತಪ್ರತಿಶಾಸ್ತ್ರದ ವಿಭಾಗಾಧ್ಯಕ್ಷರಾದ ಡಾ. ವಿನಾಯಕ ನಾಮಣ್ಣವರರವರು ಮುಖ್ಯ ಸಂಯೋಜಕರಾಗಿ ಮತ್ತು ಸಹಾಯಕ ಪ್ರಾಧ್ಯಾಪಕರಾದ ಡಾ. ರಾಮಕೃಷ್ಣ ಭಟ್ ಕೆ. ಹಾಗೂ ಡಾ. ಪ್ರಭುಸ್ವಾಮಿ ಎನ್. ಇವರು ಸಂಯೋಜಕರಾಗಿ ಕಾರ್ಯನಿರ್ವಹಿಸಿದರು. ಕಾರ್ಯಗಾರದಲ್ಲಿ ಒಟ್ಟು 110 ವಿದ್ಯಾರ್ಥಿಗಳು ಭಾಗವಹಿಸಿದ್ದರು.



# ಮಹಾತ್ಮ ಗಾಂಧೀಜಿ ಶುದ್ಧತೆಯ ಪ್ರತೀಕ. ಸತ್ಯ, ಅಹಿಂಸೆ, ಸರ್ವೋದಯ ತತ್ವಕ್ಕೆ ಬದ್ಧ ಹಾಗೂ ಜೀವನ ಸತ್ಯಾಗ್ರಹಕ್ಕೆ ತಾತ್ವಿಕ ನೆಲೆ ಕೊಟ್ಟ ಮಹಾತ್ಮ: ವೂಡೇಪೇ ಕೃಷ್ಣ

ವರದಿ: **ಡಾ. ವಿನಯ್ ಪಿ.**
**ಸಹಾಯಕ ಪ್ರಾಧ್ಯಾಪಕರು, ಕಸಂವಿ**




ಸಾರ್ವಜನಿಕ ಜೀವನದಲ್ಲಿರುವ ವ್ಯಕ್ತಿ ಹೇಗಿರಬೇಕು ಮತ್ತು ಸಾರ್ವಜನಿಕ ಹಣವನ್ನು ಹೇಗೆ ಬಳಸಬೇಕು ಎಂಬುವುದಕ್ಕೆ ಗಾಂಧೀಜಿ ದೊಡ್ಡ ನಿದರ್ಶನವಾಗಿದ್ದು, ಇಂದಿನ ಸಾರ್ವಜನಿಕ ಜೀವನದಲ್ಲಿ ಇರುವವರಿಗೆ ಅದು ಅನುಕರಣೀಯ ಎಂದು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೂಡೆ ಪಿ. ಕೃಷ್ಣ ಹೇಳಿದರು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ದಿ:30.12.2018 ಮಂಗಳವಾರದಂದು ವಿವಿಯ ಸಭಾಂಗಣದಲ್ಲಿ ಆಯೋಜಿಸಿದ್ದ 'ಮಹಾತ್ಮ ಗಾಂಧೀಜಿ ಅವರ ತಾತ್ವಿಕ ಚಿಂತನೆಗಳು" ವಿಶೇಷ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಗಾಂಧೀಜಿ ಅವರು ಸತ್ಯ, ಅಹಿಂಸೆ, ಸತ್ಯಾಗ್ರಹ ಹಾಗೂ ಸರ್ವೋದಯ ತತ್ವಗಳಿಗೆ ಬದ್ದರಾಗಿ ಬದುಕಿ ತೋರಿಸಿದರು. ಸತ್ಯ ಶೋಧನೆಯ ಮೂಲಕ ಸತ್ಯಾಗ್ರಹಕ್ಕೆ ತಾತ್ವಿಕನೆಲೆ ಒದಗಿಸಿದರು. ರಕ್ತಚೆಲ್ಲದೆ ದೇಶಕ್ಕೆ ಸ್ವಾತಂತ್ರ್ಯ ದೊರಕಿಸಿಕೊಟ್ಟ ಜಗತ್ತಿನ ಏಕೈಕ ವ್ಯಕ್ತಿ ಗಾಂಧಿ. ಸತ್ಯ ಮತ್ತು ಅಹಿಂಸೆ ಎತ್ತಿ ಹಿಡಿಯಲು ಒಟ್ಟು 2329 ದಿನಗಳ ಕಾಲ ಜೈಲುವಾಸ ಅನುಭವಿಸಿ, 142 ದಿನ ಉಪವಾಸ ಸತ್ಯಾಗ್ರಹ ಮಾಡಿದರು. ಅವರು ಎಂದಿಗೂ ಬ್ರಿಟೀಷರನ್ನು ದ್ವೇಷಿಸಲಿಲ್ಲ. ಬದಲಾಗಿ ಅವರ ನೀತಿಗಳನ್ನು ವಿರೋಧಿಸಿದರು ಎಂದು ತಿಳಿಸಿದರು.

ಇಂದಿಗೂ ಭ್ರಷ್ಟಾಚಾರ, ಜಾತೀಯತೆ, ಭಯೋತ್ಪಾದನೆಯಂತಹ ಪಿಡುಗುಗಳು ಹೆಚ್ಚಾಗಿವೆ. ಬಡವನು ಮತ್ತಷ್ಟು ಶ್ರೀಮಂತರಾಗುತ್ತಿದ್ದಾರೆ. ಹಾಗಾಗಿ ಆಳುವವರು ಬಡವರ, ಹಳ್ಳಿಗಳ ರೈತರ ಪರ ಚಿಂತಿಸಿ ನೀತಿಗಳನ್ನು ರೂಪಿಸಬೇಕಿದೆ ಎಂದು ಹೇಳಿದರು.

ಮೈಸೂರು ವಿವಿ ಪ್ರಾಚ್ಯವಿದ್ಯಾ ಸಂಶೋಧನಾಲಯದ ನಿರ್ದೇಶಕ ಪ್ರೊ.ಎಸ್. ಶಿವರಾಜಪ್ಪ ಮಾತನಾಡಿ, ಗಾಂಧಿ ಅವರ ಪ್ರಕಾರ ಸ್ವಾವಲಂಬಿಗಳಾಗಿ ಶೋಷಣೆ ರಹಿತವಾಗಿ ಬದುಕುವುದೇ ಸ್ವಾತಂತ್ರ್ಯ. ಆದರೆ, ಇಂದು ಸ್ವಾತಂತ್ರ್ಯ ವ್ಯಾಖ್ಯಾನ ಬದಲಾಗಿದೆ. ಗಾಂಧೀಜಿ ಅವರು, ಧರ್ಮದ ಮೂಲಕ ಸಂಸ್ಕೃತಿ ಬೆಳೆಯಬೇಕು ಎಂದು ಪ್ರತಿಪಾದಿಸಿದ್ದರು. ಅವರ ಚಿಂತನೆ ಮತ್ತು ತತ್ವಗಳು ಎಲ್ಲ ಕಾಲಕ್ಕೂ ಪ್ರಸ್ತುತ ಎಂದು ಅಭಿಪ್ರಾಯಪಟ್ಟರು. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಮಾನ್ಯ ಕುಲಪತಿಗಳಾದ ಪ್ರೊ, ಪದ್ಮಾಶೇಖರ್, ಪ್ರೊ. ವ್ಹಿ ಗಿರೀಶ್‌ಚಂದ್ರರವರು, ಡಾ. ವಿನಯ್, ಡಾ.ಗೋವಿಂದ ಬಿ. ಮತ್ತಿತರರು ಉಪಸ್ಥಿತರಿದ್ದರು.

**ರಾಷ್ಟ್ರೀಯ ಸೇವಾ ಯೋಜನೆ ಕೋಶದ ವತಿಯಿಂದ ನಡೆದ**

# ಡಾ. ಬಿ.ಆರ್. ಅಂಬೇಡ್ಕರ್ ಅವರ ತತ್ವಗಳ ಹಾಗೂ ಇತರ ಮಹಾಪುರುಷರ ತತ್ವಗಳ ತೌಲನಿಕ ಅಧ್ಯಯನ ಕುರಿತಾದ ಎರಡು ದಿನಗಳ ರಾಜ್ಯ ಮಟ್ಟದ ವಿಚಾರ ಸಂಕಿರಣ - 2018

ವರದಿ: **ವಿದ್ವಾನ್. ಸುರೇಶ ಬಿ.ಆರ್.**
ಕಿರಿಯ ಸಹಾಯಕರು, ಕಸಂವಿ



ದಿನಾಂಕ:02.11.2019ರಿಂದ 03.11.2019ರಂದು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಹಮ್ಮಿಕೊಂಡ ಈ ಕಾರ್ಯಕ್ರಮದಲ್ಲಿ ದೇಶದಲ್ಲಿ ತಾಂಡವವಾಡುತ್ತಿದೆ ಬೌದ್ಧಿಕ ಭ್ರಷ್ಟತೆ ದೇಶದಲ್ಲಿ ಆರ್ಥಿಕ ಭ್ರಷ್ಟತೆಯೂ ಇದ್ದು ಈ ವಲಯದ ಭ್ರಷ್ಟತೆಯಲ್ಲಿ ಯಾವುದು ಸತ್ಯ, ಯಾವುದು ಅಸತ್ಯ ಎಂದು ನೋಡದೆ ಬೌದ್ಧಿಕ ಭ್ರಷ್ಟತೆ ತಾಂಡವವಾಡುತ್ತಿದೆ ಎಂದು ಹಿರಿಯ ಸಾಹಿತಿ ಬರಗೂರು ರಾಮಚಂದ್ರಪ್ಪ ವಿಶ್ಲೇಷಿಸಿದರು.

ಪಕ್ಷಪಾತ,ಜಾತಿಪರ, ಧರ್ಮ ಪರವಾಗಿ ವಿಚಾರಗಳು ಪ್ರತಿಪಾದನೆ ಬೇರೆ. ಅಭಿಪ್ರಾಯವೇ ಬೇರೆ. ಎಲ್ಲೆಡೆ ಸಮಯ ಸಾಧಕ ರಾಜಕಾರಣ ಆವರಿಸಿದೆ. ಭಿನ್ನಾಭಿಪ್ರಾಯಗಳು ವ್ಯಕ್ತಿ ನಿಂದನೆಗೆ ಮಾತ್ರ ಸೀಮಿತವಾಗದೆ ಬಲಿಯ ಹಂತಕ್ಕೂ ತಲುಪಿದೆ ಎಂದು ವಿಷಾದಿಸಿದರು. ಪಕ್ಷಪಾತಿ, ಧರ್ಮಾತೀತವಾದ ಚಿಂತನೆಗಳು ಬಲಿ ಕೇಳುವುದಿಲ್ಲ. ಮಹಾನ್ ಸಾಧಕರು ಇನ್ನೊಬ್ಬರನ್ನು ಸಾಧನವಾಗಿ ಬಳಸುವುದು ತಪ್ಪಬೇಕು.




ಮಹಾತ್ಮ ಗಾಂಧೀಜಿಯವರು ಹಿಂದೆ ಧರ್ಮದ ಒಳಗಿನಿಂದಲೇ ತಮ್ಮ ಚಿಂತನೆಯನ್ನು ಪ್ರತಿಪಾದಿಸಿದ್ದರು.

ಅಂಬೇಡ್ಕರ್ ಅವರ ಹಿಂದೂ ಧರ್ಮದ ಹೊರಗಿನಿಂದ ತಮ್ಮ ಚಿಂತೆನೆಯನ್ನು ಪ್ರತಿಪಾದಿಸಿದರು. ಅಂಬೇಡ್ಕರ್ ಅವರದು ಸಾಮಾಜಿಕ ಪರಿಭಾಷೆ. ಗಾಂಧೀಜಿಯವರದು ಆಧ್ಯಾತ್ಮಿಕ ಪರಿಭಾಷೆ ಎಂದು ಪ್ರತಿಪಾದಿಸಿದರು. ನಾಯಕ ಮತ್ತು ಖಳನಾಯಕನ ಆಚೆಗೆ ತಾತ್ವಿಕ ಅಧ್ಯಯನ ಇರಬೇಕು. ಅಂಬೇಡ್ಕರ್ ಓರ್ವ ವಿದ್ವಾಂಸ, ಚಿಂತಕ, ಹೋರಾಟಗಾರರೂ ಆಗಿದ್ದರು ಎಂದು ಹೇಳಿದರು.

ಪ್ರೊ.ಗಣನಾಥ ಶೆಟ್ಟಿ ಎಕ್ಕಾರು ಆಶಯ ನುಡಿಗಳನ್ನಾಡಿ, ಭಾರತ ಕಂಡ ಅಪರೂಪದ ವ್ಯಕ್ತಿಯಾಗಿದ್ದ ಡಾ. ಅಂಬೇಡ್ಕರ್ ಆಗಿನ ಸಂದರ್ಭದಲ್ಲೂ ಸಾಕಷ್ಟು ಅಧ್ಯಯನ ಮಾಡಿ ಮೇಲ್ಮಟ್ಟಕ್ಕೆ ಬಂದವರಾಗಿದ್ದಾರೆ. ಅವರ ವ್ಯಕ್ತಿತ್ವ, ಬದುಕು, ಬೆಳವಣಿಗೆ ಯುವ ಪೀಳಿಗೆಗೆ ಯಾವತ್ತೂ ದಾರಿ ದೀಪ ಎಂದು ನುಡಿದರು. ಗಾಂಧಿ, ಅಂಬೇಡ್ಕರ್ ಅವರ ವಿಚಾರ, ಚಿಂತನೆಗಳನ್ನು ಪ್ರಚಾರಪಡಿಸಲು ಸರ್ಕಾರದಿಂದ 6.5 ಕೋಟಿ ಅನುದಾನ ನೀಡಲಾಗಿದೆ.




ಮುಖ್ಯ ಅತಿಥಿಗಳಾಗಿ ಆಗಮಿಸಿ, ಡಾ. ನಂಜುಂಡಸ್ವಾಮಿ,(ಐ.ಪಿ.ಎಸ್) ಸ್ವಾರ್ಥಿಗಳು ತುಂಬಿಕೊಂಡಿರುವ ಸಮಾಜದಲ್ಲಿ ಬಸವಣ್ಣ, ಅಂಬೇಡ್ಕರ್ ಅಂತಹ ವ್ಯಕ್ತಿಗಳು ಹುಟ್ಟುವುದಿಲ್ಲ. ಸಮಾಜದ ಏಳಿಗೆಗೆ ಶ್ರಮಿಸುವವರು ಮರೆಯದ ಮಾಣಿಕ್ಯವಾಗುತ್ತಾರೆ.

ಸಂಪನ್ಮೂಲ ವ್ಯಕ್ತಿ: ಶ್ರೀ ಶಿವ ಸುಂದರ ಚಿಂತಕರು & ಪತ್ರಕರ್ತರು, ಬೆಂಗಳೂರು ವಿಷಯ: ಅಂಬೇಡ್ಕರ್ ಚಿಂತನೆಗಳ ಪ್ರಸ್ತುತತೆ. ಸಂಪನ್ಮೂಲ ವ್ಯಕ್ತಿ: ರಘುನಂದನ್ ದಕ್ಷಿಣ ಮಧ್ಯಕ್ಷೇತ್ರ ಸಂಯೋಜಕರು, ಪ್ರಜ್ಞಾ ಪ್ರವಾಹ ವಿಷಯ: ಅಂಬೇಡ್ಕರ್ ಮತ್ತು ದ್ರಾವಿಡವಾದ ಹಾಗೂ ಮಾರ್ಕ್ಸವಾದ ಸಂಪನ್ಮೂಲ ವ್ಯಕ್ತಿ: ಡಾ. ಬಿ.ವಿ



ವಸಂತಕುಮಾರ ಮುಖ್ಯಸ್ಥರು, ಕನ್ನಡ ವಿಭಾಗ, ಮಹಾರಾಣಿ ಮಹಿಳಾ ಕಲಾ ಮಹಾವಿದ್ಯಾಲಯ, ಮೈಸೂರು. ವಿಷಯ:ಅಂಬೇಡ್ಕರ್ ಕಲ್ಪನೆಯ ಭಾರತ ಸಂಪನ್ಮೂಲ ವ್ಯಕ್ತಿ: ಶ್ರೀ ಶ್ರೀಧರ ಪ್ರಭು ಸುಪ್ರೀಂಕೋರ್ಟ ನ್ಯಾಯವಾದಿಗಳು ವಿಷಯ: ಭಾರತೀಯ ಸಂವಿಧಾನದ ಮಹತ್ವ. ಸಂಪನ್ಮೂಲ ವ್ಯಕ್ತಿ: ಡಾ.ಎನ್.ಕೆ. ರಾಮಶೇಷನ್, ಸಂಸ್ಕೃತ ವಿದ್ವಾಂಸರು, ಮೈಸೂರು ವಿಷಯ: ಅಂಬೇಡ್ಕರ್ ಹಾಗೂ ರಾಮಾನುಜಾಚಾರ್ಯರು ಸಂಪನ್ಮೂಲ ವ್ಯಕ್ತಿ: ಶ್ರೀ ಆರ್.ಜಿ. ಹಳ್ಳಿ ನಾಗರಾಜ, ಹಿರಿಯ ಪತ್ರಕರ್ತರು, ವಿಷಯ: ಡಾ. ಬಿ.ಆರ್.ಅಂಬೇಡ್ಕರ್ ಅವರ ಚಿಂತನೆಯ ಸಾಮಾಜಿಕ ನೆಲೆಗಳು ಈ ಎಲ್ಲ ವಿಷಯಗಳ ಬಗೆಗೆ ವಿವರವಾಗಿ ಉಪನ್ಯಾಸ ನೀಡಿದರು. ಎನ್.ಎಸ್.ಎಸ್. ಸ್ವಯಂಸೇವಕರ ಪ್ರತಿಕ್ರಿಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿದರು.

# ವಿಶ್ವವಿದ್ಯಾಲಯ ಮಟ್ಟದ ರಾಷ್ಟ್ರೀಯ ಸೇವಾ ಯೋಜನೆ ಕೋಶದ ಪ್ರಥಮ ಬಿ.ಜಿ.ಎಸ್. (ಡಾ.ಬಾಲಗಂಗಾಧರನಾಥ ಸ್ವಾಮೀಜಿ) ಪ್ರಶಸ್ತಿ ಪ್ರದಾನ ಸಮಾರಂಭ

ವರದಿ: **ವಿದ್ವಾನ್. ಲೋಕೇಶ್ ವಿ.ಹೆಚ್.**
ಸಹಾಯಕರು, ಕಸಂವಿ



**ಡಾ. ಸಿದ್ಧಲಿಂಗಯ್ಯ,** ಖ್ಯಾತ ಕವಿಗಳು ಹಾಗೂ ಸಂಸ್ಕೃತಿ ಚಿಂತಕರು ಬೆಂಗಳೂರು. ಇವರು ಸಮಾರೋಪ ಭಾಷಣ ಮಾಡಿ, ದಿನಾಂಕ 03.11.2018ರಂದು ಪ್ರಶಸ್ತಿ ಪ್ರದಾನ ಮಾಡಿದರು. ಮುಖ್ಯ ಅತಿಥಿಗಳಾಗಿ ಶ್ರೀ ವೈ.ಎಂ. ಉಪ್ಪಿನ, ಯುವ ಅಧಿಕಾರಿಗಳು, ಎನ್.ಎಸ್.ಎಸ್. ಪ್ರಾದೇಶಿಕ ಕೇಂದ್ರ ಕಛೇರಿ ಬೆಂಗಳೂರು. ಭಾರತ ಸರಕಾರ, ಡಾ. ಪೂರ್ಣಿಮಾ ಜೋಗಿ, ಅನುಷ್ಠಾನ ಅಧಿಕಾರಿ (ಪ್ರೌಢಶಿಕ್ಷಣ) ರಾಜ್ಯ ಎನ್.ಎಸ್.ಎಸ್. ಕೋಶ, ಮುಂತಾದವರು ಭಾಗವಹಿಸಿ, ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನಾ ಕೋಶದ ವತಿಯಿಂದ ಪ್ರಥಮ ಬಾರಿಗೆ ವಿಶ್ವವಿದ್ಯಾಲಯ ಮಟ್ಟದ ಅತ್ಯುತ್ತಮ ಎನ್.ಎಸ್.ಎಸ್. ಅಧಿಕಾರಿ ಹಾಗೂ ಅತ್ಯುತ್ತಮ ಎನ್.ಎಸ್.ಎಸ್. ಸ್ವಯಂಸೇವಕ/ಕಿ ಅವರಿಗೆ 'ಬಿ.ಜಿ.ಎಸ್' ಪ್ರಶಸ್ತಿಯನ್ನು **ವಿದ್ವಾನ್. ಹರಿಕೃಷ್ಣರಾವ್,** ಎನ್.ಎಸ್.ಎಸ್. ಅಧಿಕಾರಿ, ಎಸ್.ಎಂ.ಎಸ್.ಪಿ. ಸಂಸ್ಕೃತ ಮಹಾವಿದ್ಯಾಲಯ, ಉಡುಪಿ ಮತ್ತು **ಚನ್ನಪ್ಪ ಟಿ.ಸಿ.** ಎನ್.ಎಸ್.ಎಸ್. ಸ್ವಯಂಸೇವಕ, ಶ್ರೀ ಕಾಲಭೈರವೇಶ್ವರ ಸಂಸ್ಕೃತ ಮಹಾವಿದ್ಯಾಲಯ, ಆದಿಚುಂಚನಗಿರಿ ಇವರುಗಳಿಗೆ ತಲಾ 3,000/–ರೂಗಳನ್ನು, ಶಾಲು, ಹಾರ, ಫಲಕವನ್ನು ನೀಡಿ ಗೌರವಿಸಲಾಯಿತು.

# ಶ್ರೀ ವೇದಾಂತದೇಶಿಕರ 750ನೇಯ ತಿರುನಕ್ಷತ್ರ ಮಹೋತ್ಸವ ವೇದಾಂತದೇಶಿಕರ ಜೀವನ ಮತ್ತು ಕೃತಿಗಳು ಎಂಬ ವಿಷಯ ಕುರಿತು ದಿನದ ಉಪನ್ಯಾಸ


ವರದಿ: **ವಿದ್ವಾನ್ ಎಸ್. ಕುಮಾರ**
**ಕುಲಸಚಿವರು (ಆಡಳಿತಾಂಗ)**
**ಸಂ.ಸಂ.ಸಂ. ಮೇಲುಕೋಟೆ**


ಸಂಸ್ಕೃತ–ಸಂಶೋಧನ–ಸಂಸ್ಥೆಯು ಕಳೆದ 40 ವರ್ಷಗಳಿಂದ ರಾಮಾನುಜರ ಸಿದ್ಧಾಂತ,ಸಂದೇಶ ಹಾಗೂ ಸಂಸ್ಕೃತಿಗಳನ್ನು ಪ್ರಚಾರಮಾಡುವ ಕಾರ್ಯಕ್ರಮದಲ್ಲಿ ತೊಡಗಿದೆ. ಈಗಾಗಲೇ ಸಂಸ್ಕೃತ, ಕನ್ನಡ, ಆಂಗ್ಲಭಾಷೆಗಳಲ್ಲಿ 150ಕ್ಕೂ ಅಧಿಕವಾಗಿ ವಿಮರ್ಶಾತ್ಮಕ ಸಂಪಾದನೆ, ಕಿರುಹೊತ್ತಿಗೆಗಳು, ನಿಯತಕಾಲಿಕೆಗಳು ಮುಂತಾದುವುಗಳನ್ನು ಪ್ರಕಟಿಸಿದೆ. ಇದಲ್ಲದೆ ವಿದ್ವದ್ಗೋಷ್ಠೀ, ವಿಚಾರಸಂಕಿರಣ ಮತ್ತು ಕಾರ್ಯಾಗಾರಗಳನ್ನು ಪ್ರತಿವರ್ಷವೂ ಆಯೋಜಿಸಿಕೊಂಡು ಸರಿಯಷ್ಟೇ, ಭಗವದ್ರಾಮಾನುಜರ ಸಹಸ್ರಮಾನೋತ್ಸವ ಸಂದರ್ಭದಲ್ಲಿ 2017ರಲ್ಲಿ ನಾಡಿನಾದ್ಯಂತ ಪ್ರಖ್ಯಾತ ವಿದ್ವಾಂಸರಿಂದ ಉಪನ್ಯಾಸ ಕಾರ್ಯಕ್ರಮಗಳನ್ನು ಏರ್ಪಡಿಸಿತ್ತು. ವಿಶಿಷ್ಟಾದ್ವೈತ ಸಿದ್ಧಾಂತದಲ್ಲಿ ಪ್ರಮುಖ ಆಚಾರ್ಯರಾದ ಶ್ರೀಮದ್ವೇದಾಂತದೇಶಿಕರ 750ನೆಯ ತಿರುನಕ್ಷತ್ರಮಹೊತ್ಸವು 2018ರಲ್ಲಿ ಜರುಗಿತು. ಅದರ ಅಂಗವಾಗಿ ಸಂಸ್ಥೆಯೂ ಕೂಡ ವೇದಾಂತದೇಶಿಕರ ಜೀವನ ಮತ್ತು ಕೃತಿಗಳ ಎಂಬ ವಿಚಾರವನ್ನು ಕುರಿತು ಒಂದು ದಿನದ ಉಪನ್ಯಾಸ ಕಾರ್ಯಕ್ರಮವನ್ನು ದಿನಾಂಕ :12–12–2018ರಂದು ಮೇಲುಕೋಟೆಯ ಶ್ರೀ ವೇದಾಂತದೇಶಿಕರ ಸನ್ನಿಧಿಯಲ್ಲಿ ಏರ್ಪಡಿಸಲಾಗಿತ್ತು. ಇದೇ ಸಂದರ್ಭದಲ್ಲಿ ಸುಭಾಷಿತನೀವೀ ಕನ್ನಡ ಅವತರಣಿಕೆಯು ಲೋಕಾರ್ಪಣೆಗೊಂಡಿತು.

ಈ ಉಪನ್ಯಾಸ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಸ್ಥೆಯ ನಿರ್ದೇಶಕರಾದ ಡಾ. ವೀರನಾರಾಯಣ ಎನ್.ಕೆ. ಪಾಂಡುರಂಗಿಯವರು ದೀಪೋಜ್ವಲನದ ಮೂಲಕ ನೆರವೇರಿಸಿದರು. ಈ ಸಭೆಯ ಅಧ್ಯಕ್ಷತೆಯನ್ನು ಕುಲಸಚಿವರಾದ ವಿದ್ವಾನ್ ಎಸ್. ಕುಮಾರರವರು ವಹಿಸಿದ್ದರು. ಸಭೆಯಲ್ಲಿ ವಿದ್ವತ್ಕವಿರತ್ನಂ ಅರೈಯ್ ಶ್ರೀರಾಮಶರ್ಮಾರವರು, ಶ್ರೀವೈಷ್ಣವ ಶ್ರೀ ಕೃಷ್ಣಮಾಮಾಚಾರ್ಯರು ಹಾಗೂ ಶ್ರೀಯತ ಜಿ.ಎಸ್. ಶ್ರೀನಿವಾಸಮೂರ್ತಿಯವರು ಉಪಸ್ಥಿತರಿದ್ದರು.

ಮೊದಲನೆಯ ಉಪನ್ಯಾಸ ಕಾರ್ಯಕ್ರಮವು ಬೆಳಿಗ್ಗೆ 11–00 ಘಂಟೆಗೆ ಪ್ರಾರಂಭವಾಯಿತು. ಇದರ ಅಧ್ಯಕ್ಷತೆಯನ್ನು ಡಾ. ಶೋಭಾ ವಾಸುಕಿ, ಬೆಂಗಳೂರು ಇವರು ವಹಿಸಿದ್ದರು. ಇದರಲ್ಲಿ ವಿದ್ವಾನ್ ಜಿ.ಎಸ್. ಶ್ರೀನಿವಾಸಮೂರ್ತಿಯವರು ಸುಭಾಷಿತನೀವೀ ಒಂದು ಅಧ್ಯಯನ, ಡಾ ಎನ್.ಕೆ. ರಾಮಶೇಷನ್ ಅವರು ಸ್ತೋತ್ರಗ್ರಂಥ ಮತ್ತು ವಿದ್ವಾನ್ ಎಸ್. ನಾರಾಯಣರವರು ಶ್ರೀಭಾಷ್ಯವ್ಯಾಖ್ಯಾನಕೌಶಲ ಎಂಬ ವಿಷಯಗಳನ್ನು ಕುರಿತು ಉಪನ್ಯಾಸ ಮಾಡಿದರು.

ಮಧ್ಯಾಹ್ನದ ಉಪನ್ಯಾಸದ ಅಧ್ಯಕ್ಷತೆಯನ್ನು ವಿದ್ವಾನ್ ಎಸ್. ನಾರಾಯಣರವರು ವಹಿಸಿದ್ದರು. ಇದರಲ್ಲಿ ಶ್ರೀ ಉ.ವೇ. ಆಯಿನರಸಿಂಗರವರು ದೇಶಿಕರ ಸಾಹಿತ್ಯವೈಭವ, ವಿದಾನ್ವ್. ವೈ.ಎನ್. ರಾಮಸ್ವಾಮಿ ಅಯ್ಯಂಗಾರ್‌ರವರ ದೇಶಿಕರ ಜೀವನಚರಿತ್ರೆ ಹಾಗೂ ಪ್ರಬಂಧಗಳನ್ನು ಮಂಡಿಸಿದರು.

ನಂತರ 4.00 ಘಂಟೆಗೆ ಸಮಾರೋಪ ಸಮಾರಂಭವು ಡಾ. ಶೋಭಾ ವಾಸುಕಿಯವರಿಂದ ಆರಂಭಗೊಂಡು ಸಮಾರೋಪಬಾಷಣದೊಂದಿಗೆ ಯಶಸ್ವಿಯಾಗಿ ಮುಕ್ತಾಯಗೊಂಡಿತು.

# 2018-19 ರ ಮೈಸೂರು ವಲಯಮಟ್ಟದ ಪ್ರಥಮ ಸಂಸ್ಕೃತ ಸ್ಪರ್ಧೆಗಳು

ವರದಿ: **ವಿದ್ವಾನ್ ಎನ್.ಇಂದ್ರೇಶಪ್ಪ**
**ಮೈಸೂರು ವಲಯ ಸಂಯೋಜಕರು**



ಮೈಸೂರು ವಲಯ ಮಟ್ಟದ ಸಂಸ್ಕೃತ ವಿವಿಧ ಸ್ಪರ್ಧೆಗಳು 2018–19ರ ದಿನಾಂಕ 08.12.2018 ರಂದು ಸಂಸ್ಕೃತ ಶಿಕ್ಷಣ ನಿರ್ದೇನಾಲಯದ ವತಿಯಿಂದ ಶ್ರೀ ಮನ್ಮಹರಾಜ ಸರ್ಕಾರಿ ಸಂಸ್ಕೃತ ಮಹಾಕಾಲೇಜಿನಲ್ಲಿ ವಲಯ ಮಟ್ಟದ ಸಂಸ್ಕೃತ ಸ್ಪರ್ಧೆಗಳಾದ ಪ್ರಥಮ ವಿದ್ಯಾರ್ಥಿಗಳಿಗೆ ಅಮರಕೋಶ (ಪ್ರಥಮಾ 3ನೇ ತರಗತಿ– ಶುಭಾ ಪಠ್ಯ ಪುಸ್ತಕದಲ್ಲಿರುವ 'ಮನುಷ್ಯ' ಪರ್ಯಾಯದಿಂದ 'ಸಿಂಹ' ಪರ್ಯಾಯವರೆಗೆ) ಕಂಠಪಾಠ, ಕಾವ್ಯ ತರಗತಿ ವಿದ್ಯಾರ್ಥಿಗಳಿಗೆ "ರಾಷ್ಟ್ರೀಯ ಭಾವೈಕ್ಯಮ್" ಬಗ್ಗೆ ಪ್ರಬಂಧ ಮತ್ತು ಸಾಹಿತ್ಯ ತರಗತಿ ವಿಗಯಾರ್ಥಿಗಳಿಗೆ ಸಂಸ್ಕೃತೇ ವಿಜ್ಞಾನಮ್ (5 ರಿಂದ 7 ನಿಮಿಷಗಳು) ಕುರಿತು ಭಾಷಣ ಸ್ಪರ್ಧೆಗಳು ನಡೆಸಿದೆವು. ಇದರಲ್ಲಿ ಮೈಸೂರು ಜಿಲ್ಲೆ, ಚಾಮರಾಜನಗರ ಜಿಲ್ಲೆ, ಮಂಡ್ಯ ಜಿಲ್ಲೆ ಹಾಗೂ ಕೊಡಗು ಜಿಲ್ಲೆಗಳಿಂದ ಸುಮಾರು 130 ಕ್ಕಿಂತಲೂ ಹೆಚ್ಚು ಸಂಸ್ಕೃತ ಪಾಠಶಾಲಾ ವಿದ್ಯಾರ್ಥಿಗಳು ಭಾಗವಹಿಸಿದ್ದು, ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಮನ್ಮಹರಾಜ ಸರ್ಕಾರಿ ಸಂಸ್ಕೃತ ಮಹಾಕಾಲೇಜಿನ ಪ್ರಾಂಶುಪಾಲರಾದ ಶ್ರೀ ಡಾ॥ ಕೆ.ಎಮ್. ಮಹದೇವಯ್ಯರವರು ವಹಿಸಿದ್ದರು ಹಾಗೂ ಮುಖ್ಯ ಅತಿಥಿಗಳಾಗಿ ಕೆ.ಗಂಗಣ್ಣರವರು ಹಾಗೂ ಮೈಸೂರು

ವಲಯ ಸಂಯೋಜಕರಾದ ವಿದ್ವಾನ್ ಎನ್. ಇಂದ್ರೇಶಪ್ಪರವರು, ಭಾಷಾ ಪರಿವೀಕ್ಷಕರಾದ ವಿದ್ವಾನ್ ಎಮ್. ಪರಶಿವಮೂರ್ತಿರವರ ಉಪಸ್ಥಿತರಿದ್ದರು.

ನ್ಯಾಯ ನಿರ್ಣಾಯಕ ವಿದ್ವಾಂಸರಾದ ವಿದ್ವಾನ್ ರಾಮಲಿಂಗೇಶ್ವರ ಶರ್ಮಾ, ವಿದ್ವಾನ್ ಕೆ.ಆರ್. ಶ್ರೀಧರ್, ಡಾ॥ ಪಿ.ಹೆಚ್. ವಿಜಯಲಕ್ಷ್ಮಿ, ವಿದುಷಿ ಪ್ರೇಮಕುಮಾರಿ, ವಿದ್ವಾನ್ ಕೆ.ಗಂಗಣ್ಣ, ಡಾ॥ ಚಕ್ರವರ್ತಿ ರಾಮಚಂದ್ರನ್‌ರವರು ವಹಿಸಿದ್ದರು.

ಇದರಲ್ಲಿ ಅಮರಕೋಶ ಕಂಠಪಾಠ ವಿಜೇತರು ಪ್ರಥಮ ಸ್ಥಾನ: ವಿಷ್ಣುಪ್ರಸಾದ್, ಕೆ.ಎಸ್.ಎಸ್. ಸಂಸ್ಕೃತ ಪಾಠಶಾಲೆ ಮೈಸೂರು ದ್ವಿತೀಯ ಸ್ಥಾನ:ಚನ್ನಬಸವ, ಕಾಲಭೈರವೇಶ್ವರ ಸಂಸ್ಕೃತ ಪಾಠಶಾಲೆ ಆದಿಚುಂಚನಗಿರಿ ಕ್ಷೇತ್ರ. ತೃತೀಯ ಸ್ಥಾನ: ಸಂಗೀತ ಎಸ್, ಶ್ರೀ ಶಂಕರ ವಿಲಾಸ ಸಂಸ್ಕೃತ ಪಾಠಶಾಲೆ, ಮೈಸೂರು

ಕಾವ್ಯ ಪ್ರಬಂಧ ಸ್ಪರ್ಧೆ ವಿಜೇತರು(ರಾಷ್ಟ್ರೀಯ ಭಾವೈಕ್ಯಮ್) ಪ್ರಥಮ ಸ್ಥಾನ: ಮನೋಹರ ಕೆ.ಎನ್, ಕೆ.ಎಸ್.ಎಸ್. ಸಂಸ್ಕೃತ ಪಾಠಶಾಲೆ ಮೈಸೂರು.ದ್ವಿತೀಯ ಸ್ಥಾನ: ಮಣಿಕಂಠ ಎಸ್. ಜೆ.ಎಸ್.ಎಸ್ ಸಂಸ್ಕೃತ ಪಾಠಶಾಲೆ, ಚಾಮರಾಜನಗರ, ತೃತೀಯ ಸ್ಥಾನ: ಭಾವನಾ.ಬಿ ಶ್ರೀ ಆದಿಚುಂಚನಗಿರಿ ಸಂಸ್ಕೃತ ಪಾಠಶಾಲೆ ಮೈಸೂರು

ಸಾಹಿತ್ಯ ಭಾಷಣಾ ಸ್ಪರ್ಧೆ ವಿಜೇತರ (ಸಂಸ್ಕೃತೇ ವಿಜ್ಞಾನವಮ್) ಪ್ರಥಮ ಸ್ಥಾನ: ಶ್ರೀನಾಥ್ ಎಲ್,ಕೆ.ಎಸ್.ಎಸ್. ಸಂಸ್ಕೃತ ಪಾಠಶಾಲೆ, ಮೈಸೂರು. ದ್ವಿತೀಯ ಸ್ಥಾನ:ಚನ್ನಬಸವ, ಕಾಲಭೈರವೇಶ್ವರ ಸಂಸ್ಕೃತ ಪಾಠಶಾಲೆ ಆದಿಚುಂಚನಗಿರಿ ಕ್ಷೇತ್ರ. ತೃತೀಯ ಸ್ಥಾನ: ಗಂಗಾಧರಸ್ವಾಮಿ ಚರಂತಿಮಠ್ ಶ್ರೀ ಶಂಕರ ವಿಲಾಸ ಸಂಸ್ಕೃತ ಪಾಠಶಾಲೆ ಮೈಸೂರು. ಮೇಲ್ಕಂಡ ವಿದ್ಯಾರ್ಥಿಗಳು ಬಹುಮಾನ ಪಡೆದುಕೊಂಡಿರುತ್ತಾರೆ.

ಈ ಕಾರ್ಯಕ್ರಮದಲ್ಲಿ ಬಹುಮಾನವನ್ನು ಎಲ್ಲಾ ವೇದಿಕೆ ಆಹ್ವಾನಿತರು ವಿತರಿಸಿದರು. ಹೀಗೆ ಪ್ರತಿ ವಿಭಾಗದಲ್ಲಿ ಇಬ್ಬರು ವಿದ್ಯಾರ್ಥಿಗಳಿಗೆ ಪ್ರಾಂಶುಪಾಲರಾದ ಶ್ರೀ ಡಾ. ಕೆ.ಎಮ್. ಮಹದೇವಯ್ಯರವರು ವೈಯಕ್ತಿಕವಾಗಿ ಬಹುಮಾನ ನೀಡಿ, ಈ ಸಂದರ್ಭದಲ್ಲಿ ಪ್ರತಿವರ್ಷವು ಇದೇ ರೀತಿ ಸ್ಪರ್ಧೆಗಳು ನಮ್ಮ ಕಾಲೇಜಿನಲ್ಲಿ ನಡೆದರೆ ಪ್ರತಿ ಮೈಸೂರು ವಿದ್ಯಾರ್ಥಿಗಳಿಗೆ ಹಾಗೂ ಮೈಸೂರು ಹೊರಗಿನ ವಿದ್ಯಾರ್ಥಿಗಳಿಗೆ ಮುಂದಿನ ವರ್ಷ ಎಲ್ಲರಿಗೂ ಬಹುಮಾನ ನೀಡುತ್ತೇನೆ ಎಂದು ಸಭೆಯಲ್ಲಿ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಪಾಠಶಾಲೆಗಳ ಹಿರಿಯ ಶಿಕ್ಷಕರುಗಳಾದ ಸಿದ್ಧರಾಜು, ಶ್ರೀಕಂಠಮೂರ್ತಿ, ದೊರೆಸ್ವಾಮಿ, ಜಿ.ಪರಶಿವಮೂರ್ತಿ ರವರಿಗೆ ಸಂಸ್ಕೃತ ಕಾಲೇಜಿನ ವತಿಯಿಂದ ಸನ್ಮಾನಿಸಲಾಯಿತು. ಹಾಗೂ ಪಿ.ಹೆಚ್.ಡಿ ಪಡೆದಿರುವ ಜಿ ಭೂಪಾಲಿ ಹಾಗೂ ಕೃಷ್ಣ ಗಣಪತಿ ಭಟ್ ರವರಿಗೆ ಸನ್ಮಾನಿಸಲಾಯಿತು.

# ೨೦೧೮-೧೯ ರ ಮೈಸೂರು ವಲಯ ಮಟ್ಟದ ದ್ವಿತೀಯ ಸಂಸ್ಕೃತ ಸ್ಪರ್ಧೆಗಳು

ವರದಿ: **ವಿದ್ವಾನ್ ಎನ್.ಇಂದ್ರೇಶಪ್ಪ**
ಮೈಸೂರು ವಲಯ ಸಂಯೋಜಕರು



ಮೈಸೂರು ವಲಯ ಮಟ್ಟದ ಸಂಸ್ಕೃತ ವಿವಿಧ ಸ್ಪರ್ಧೆಗಳು 2018–19ರ ದಿನಾಂಕ 11.12.2018 ರಂದು ಸಂಸ್ಕೃತ ಶಿಕ್ಷಣ ನಿರ್ದೇನಾಲಯದ ವತಿಯಿಂದ ಸಂಸ್ಕೃತ ಪಾಠಶಾಲೆ ಸಂಸ್ಕೃತಮ್ ಉತ್ತರ ಬಡಾವಣೆ ಹಾಸನದಲ್ಲಿ ವಲಯ ಮಟ್ಟದ ಸಂಸ್ಕೃತ ಸ್ಪರ್ಧೆಗಳಾದ ಪ್ರಥಮ ವಿದ್ಯಾರ್ಥಿಗಳಿಗೆ ಅಮರಕೋಶ (ಪ್ರಥಮಾ 3ನೇ ತರಗತಿ–ಶುಭಾ ಪತ್ಯ ಪುಸ್ತಕದಲ್ಲಿರುವ 'ಮನುಷ್ಯ' ಪರ್ಯಾಯದಿಂದ 'ಸಿಂಹ' ಪರ್ಯಾಯವರೆಗೆ) ಕಂಠಪಾಠ, ಕಾವ್ಯ ತರಗತಿ ವಿದ್ಯಾರ್ಥಿಗಳಿಗೆ "ರಾಷ್ಟ್ರೀಯ ಭಾವೈಕ್ಯಮ್" ಬಗ್ಗೆ ಪ್ರಬಂಧ ಸ್ಪರ್ಧೆಗಳು ನಡೆದವು, ಇದರಲ್ಲಿ ಹಾಸನ ಜಿಲ್ಲೆ, ಚಿಕ್ಕಮಗಂಳೂರು ಜಿಲ್ಲೆ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಿಂದ ಸುಮಾರು 60 ಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದು, ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಕೃತಮ್ ಸಂಸ್ಥೆ(ರಿ)ರವರಾದ ಕಾರ್ಯದರ್ಶಿಗಳು ನೆರವೇರಿಸಿದ್ದು ಹಾಗೂ ಮೈಸೂರು ವಲಯ ಸಂಯೋಜಕರಾದ ವಿದ್ವಾನ್ ಎನ್. ಇಂದ್ರೇಶಪ್ಪರವರು ಭಾಷೆ ಪರಿವೀಕ್ಷಕರಾದ ವಿದ್ವಾನ್ ಎಮ್ ಪರಶಿವಮೂರ್ತಿ



ಮುಖ್ಯ ಅತಿಥಿಗಳಾಗಿ ಮೈಸೂರು ವಲಯ ಮಟ್ಟದ ಅಧ್ಯಕ್ಷರು ಪ್ರಸಾದರವರ ಸಹಯೋಗದಿಂದ ನಡೆಸಿದ್ದಾರೆ.

ಇದರಲ್ಲಿ ಅಮರಕೋಶ ಕಂಠಪಾಠ ವಿಜೇತರು: ಪ್ರಥಮ ಸ್ಥಾನ: ಅನಿರುದ್ಧ ಸಿ.ಆರ್ ಸಂಸ್ಕೃತಮ್ ಪಾಠಶಾಲೆ ಉತ್ತರ ಬಡಾವಣೆ ಹಾಸನ. ದ್ವಿತೀಯ ಸ್ಥಾನ: ದೀಪಾಶ್ರೀ ಎನ್, ಶ್ರೀರಾಮಕುಂಜೇಶ್ವರ ಸಂಸ್ಕೃತ ಪಾಠಶಾಲೆ ರಾಮಕುಂಜ, ದ.ಕ.ಜಿ. ತೃತೀಯ ಸ್ಥಾನ: ಸುಶ್ಮಿತಾ ಎಮ್.ಆರ್. ಶ್ರೀ ಉಭಯ ಭಾರತೀ ಸಂಸ್ಕೃತ ಪಾಠಶಾಲೆ ಹುಲುಗುಂಡಿ ಬೇಲೂರು ತಾಲ್ಲೂಕು.

## ಕಾವ್ಯ ಪ್ರಬಂಧ ಸ್ಪರ್ಧೆ ವಿಜೇತರು(ರಾಷ್ಟ್ರೀಯ ಭಾವೈಕ್ಯಮ್)

ಪ್ರಥಮ ಸ್ಥಾನ: ಸುನಿಧಿ ಎಸ್. ಶ್ರೀ ಹರಿಗರೇಶ್ವರ ಸಂಸ್ಕೃತ ಪಾಠಶಾಲೆ ದುರ್ಗಾ ಉಡುಪಿ ಜಿಲ್ಲೆ. ದ್ವಿತೀಯ ಸ್ಥಾನ: ರೋಹಿತ ಪರಾಡ್ಕರ್ ಶ್ರೀನಾಗಲಿಂಗೇಶ್ವರಸ್ವಾಮಿ ಸಂಸ್ಕೃತ ಪಾಠಶಾಲೆ ಆಲಂಗಾರು ದಕ್ಷಿಣ ಕನ್ನಡ ಜಿಲ್ಲೆ. ತೃತೀಯ ಸ್ಥಾನ: ಮಯೂರಿ ಎಮ್. ಜಿ ಶ್ರೀರಾಮಕುಂಜೇಶ್ವರ ಸಂಸ್ಕೃತ ಪಾಠಶಾಲೆರಾಮಕುಂಜ, ದಕ್ಷಿಣ ಕನ್ನಡ ಜಿಲ್ಲೆ.

# ಕರ್ನಾಟಕ ರಾಜ್ಯ ಸಂಸ್ಕೃತ ಪಾಠಶಾಲಾ ಶಿಕ್ಷಕರ ಶೈಕ್ಷಣಿಕ ಸಮ್ಮೇಳನ-2018

ವರದಿ: **ವಿದ್ವಾನ್ ಸಿ.ಎನ್. ಚಂದ್ರಶೇಖರಯ್ಯ**
ಅಧ್ಯಕ್ಷರು, ಕ.ರಾ.ಸಂ.ಪಾ.ಶಿ. ಸಂಘ, ಬೆಂಗಳೂರು.



ಕರ್ನಾಟಕ ರಾಜ್ಯ ಸಂಸ್ಕೃತ ಪಾಠಶಾಲಾ ಶಿಕ್ಷಕರ ಸಂಘದ ವತಿಯಿಂದ ರಾಜ್ಯ ಮಟ್ಟದ 'ಸಂಸ್ಕೃತ ಪಾಠಶಾಲಾ ಶಿಕ್ಷಕರ ಶೈಕ್ಷಣಿಕ ಸಮ್ಮೇಳನ' ವನ್ನು ದಿನಾಂಕ: 21.12.2018ನೇ ಶುಕ್ರವಾರ ಬೆಳಿಗ್ಗೆ 11.00ಘಂಟೆಗೆ ಬೆಂಗಳೂರಿನ ಬಸವನಗುಡಿ ರಸ್ತೆಯಲ್ಲಿರುವ 'ಶ್ರೀ ನಿಜಗುಣರ ಕ್ಷೇತ್ರ'ದ ಸಮುದಾಯ ಭವನದಲ್ಲಿ ಆಯೋಜಿಸಲಾಗಿತ್ತು, ಈ ಶುಭ ಸಮಾರಂಭದ ಉದ್ಘಾಟನೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪೂಜ್ಯ ಮಹಾಪೌರರಾದ ಶ್ರೀಮತಿ ಗಂಗಾಂಬಿಕೆ ರವರು ನೆರವೇರಿಸಿ ಮಾತನಾಡುತ್ತಾ, ಭಾರತದ ಭವ್ಯ ಪರಂಪರೆಗೆ ಘನತೆ ಮತ್ತು ಪಾವಿತ್ರ್ಯತೆಯನ್ನು ತಂದು ಕೊಟ್ಟರುವುದರಲ್ಲಿ ಸಂಸ್ಕೃತ ಭಾಷೆಯ ಪಾತ್ರ ಮಹತ್ತರವಾದದ್ದು, ಸಂಸ್ಕಾರ ಪೂರ್ಣವಾದ ವಿದ್ಯಾರ್ಥಿಗಳನ್ನು ನಿರ್ಮಿಸಲು ಹಾಗೂ ಮಕ್ಕಳಲ್ಲಿ ಧಾರ್ಮಿಕ ಪ್ರಜ್ಞೆ ಮೂಡಿಸಲು ಸಂಸ್ಕೃತ ಭಾಷೆಯು ಸಹಕಾರ, ಪುಟ್ಟ ಮಕ್ಕಳಿಗೆ ಈ ಭಾಷೆಯನ್ನು ಪರಿಚಯಿಸಿ, ಸಂಸ್ಕೃತ ಭಾಷೆಯ ಕಲಿಕೆಗೆ ಪ್ರೋತ್ಸಾಹಿಸುತ್ತಿರುವ ಶಿಕ್ಷಕರ ಸೇವೆಯನ್ನು ಮತ್ತು ಈ ನಿಟ್ಟಿನಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ನೀಡುತ್ತಿರುವ ಸಹಕಾರವನ್ನು ಶ್ಲಾಘಿಸಿದರು. ಇದೇ ಸಂದರ್ಭದಲ್ಲಿ ಸಂಸ್ಕೃತ ಪಾಠಶಾಲಾ ಶಿಕ್ಷಕರ ಸಂಘವು, ಭವನ ನಿರ್ಮಾಣಕ್ಕೆ ನಿವೇಶನವನ್ನು ಕೋರಿ ಸಲ್ಲಿಸಿದ್ದ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿ, ಈ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಪ್ರಯತ್ನಿಸುವುದಾಗಿ ತಿಳಿಸಿದರು.

ಸಮ್ಮೇಳನದ ಅಧ್ಯಕ್ಷತೆಯನ್ನು ಅಲಂಕರಿಸಿದ್ದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ.ಪದ್ಮಾಶೇಖರ್ ಅವರು ಅಧ್ಯಕ್ಷೀಯ ನುಡಿಗಳನ್ನಾಡುತ್ತಾ, ಆರಂಭದಿಂದ ಇಲ್ಲಿಯತನಕ ಆಗಿರುವ ಸಾಧನೆಯನ್ನು ಪರಿಚಯಿಸಿದರು. ವಿಶ್ವವಿದ್ಯಾಲಯದ ಅಡಿಯಲ್ಲಿ ಉನ್ನತ ಶಿಕ್ಷಣಕ್ಕೆ ಕೈಗೊಂಡಿರುವ ವಿವಿಧ ಯೋಜನೆಗಳು ಮತ್ತು ಪಾಠಶಾಲಾ ಹಂತದಲ್ಲಿ ಗುಣಾತ್ಮಕವಾದ ಸಂಸ್ಕೃತ ಶಿಕ್ಷಣವನ್ನು ನೀಡುವ ಉದ್ದೇಶದಿಂದ ನಿರ್ದೇಶನಾಲಯ ಮೂಲಕ ಶಿಕ್ಷಕರಿಗೆ ಶೈಕ್ಷಣಿಕ ಕಾರ್ಯಾಗಾರ, ಉಪನ್ಯಾಸ ಮಾಲಿಕೆಗಳನ್ನು ಆಯೋಜಿಸಿರುವುದನ್ನು ತಿಳಿಸಿ ಶಿಕ್ಷಕರು ಪೂರ್ಣ ಪ್ರಯೋಜನ ಪಡೆದುಕೊಳ್ಳಲು ಸೂಚಿಸಿದರು. ವೇದಗಳು, ಉಪನಿಷತ್ತುಗಳು, ದರ್ಶನಗಳು, ಮಹಾಕಾವ್ಯಗಳು ಇವೆಲ್ಲ ಸಂಸ್ಕೃತದ ಅನರ್ಘ ಸಂಪತ್ತು ಇವುಗಳನ್ನು ಶಿಕ್ಷಕರು ಅಧ್ಯಯನಮಾಡಿ ಪಾಂಡಿತ್ಯ ಬೆಳೆಸಿಕೊಳ್ಳಬೇಕೆಂದರು.



ಇದೆ ಸಂದರ್ಭದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರಾದ ಶ್ರೀ ಡಿ.ಎನ್.ರಮೇಶ ರವರು ನಿವೃತ್ತ ಶಿಕ್ಷಕರನ್ನು ಸನ್ಮಾನಿಸಿ – ತಮ್ಮ ಘನವಂತ ಸೇವೆಯ ಮೂಲಕ ಸಾವಿರಾರು ವಿದ್ಯಾರ್ಥಿಗಳನ್ನು ತಯಾರು ಮಾಡಿ ನಾಡಿಗೆ ಸಮರ್ಪಿಸಿ ಸಾರ್ಥಕ ಸೇವೆಯ ಮೂಲಕ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿರುವ ಶಿಕ್ಷಕರು ತಮ್ಮ ವಿಶ್ರಾಂತ ಅವಧಿಯಲ್ಲು ತಮ್ಮ ಸೇವೆ ಸಂಸ್ಕೃತ ಕ್ಷೇತ್ರಕ್ಕೆ ಮೀಸಲಿರಲಿ ಎಂದು ಆಶೀಸಿದರು.

ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಮಾನ್ಯ ನಿರ್ದೇಶಕರಾದ ಪ್ರೊ.ವಿ.ಗಿರೀಶಚಂದ್ರರವರು ಉಪನ್ಯಾಸ ನೀಡುತ್ತಾ, ಆಧುನಿಕ ಶೈಕ್ಷಣಿಕ ಅಗತ್ಯತೆಯನ್ನು ಮನಗಂಡು ಪ್ರಥಮದಿಂದ ಪದವಿ ತರಗತಿಯವರೆಗೆ ವೇತನ ಹಾಗೂ ವಿವಿಧ ಯೋಜನೆಯ ಮೂಲಕ ಸಂಸ್ಕೃತ ಕಲಿಕೆಯತ್ತ ಮಕ್ಕಳನ್ನು ಹುರಿದುಂಬಿಸುತ್ತಾ, ಜಿಲ್ಲಾ ಹಾಗೂ ವಲಯ ಹಂತದಲ್ಲಿ ಸ್ಪರ್ಧೆಗಳನ್ನು ಏರ್ಪಡಿಸುತ್ತಿರುವುದು, ಹೀಗೆ ವಿಶ್ವವಿದ್ಯಾಲಯ ಮತ್ತು ನಿರ್ದೇಶನಾಲಯದ ಎಲ್ಲಾ ಯೋಜನೆಗಳನ್ನು ಸಮರ್ಪಕವಾಗಿ ಸದ್ಬಳಕೆ ಮಾಡಿಕೊಳ್ಳುತ್ತಿರುವ ಪಾಠಶಾಲಾ ಶಿಕ್ಷಕರ ಬಗ್ಗೆ ಹರ್ಷ ವ್ಯಕ್ತಪಡಿಸಿದರು.

ಮಾನ್ಯ ಉಪಕುಲಸಚಿವರು ಹಾಗೂ ಹಣಕಾಸು ಅಧಿಕಾರಿಗಳಾದ ಶ್ರೀ ವಿದ್ವಾನ್ ಪಿ.ಆರ್. ಪಾಗೋಜಿರವರು ಶಿಕ್ಷಕರಿಗೆ ಸಮಯಕ್ಕೆ ಸರಿಯಾಗಿ ವೇತನ ಹಾಗೂ ಇತರೆ ಭತ್ಯೆಗಳನ್ನು ದೊರಕಿಸುತ್ತಾ ಸುವ್ಯವಸ್ಥಿತವಾಗಿ ನಡೆಯುತ್ತಿರುವ ಪರೀಕ್ಷೆಗಳನ್ನು ಹಾಗೂ ಪ್ರಸಾರಾಂಗದ ಕಾರ್ಯ ವೈಖರಿಯನ್ನು ಶ್ಲಾಘೀಸಿದರು. ಸಂಘದ ಅಧ್ಯಕ್ಷರಾದ ಶ್ರೀ ಸಿ.ಎನ್. ಚಂದ್ರಶೇಖರಯ್ಯನವರು ಪ್ರಾಸ್ತಾವಿಕ ನುಡಿಯ ಮೂಲಕ ಸಂಘದ ವಾರ್ಷಿಕ ಕಾರ್ಯಸಾಧನೆಗಳು ಹಾಗೂ ವಿಶ್ವವಿದ್ಯಾಲಯ ಮತ್ತು ನಿರ್ದೇಶನಾಲಯದಿಂದ ಸಮಸ್ತ ಸಂಸ್ಕೃತ ಪಾಠಶಾಲಾ ಶಿಕ್ಷಕರಿಗೆ ದೊರೆಯುತ್ತಿರುವ ಸೌಲಭ್ಯ ಮತ್ತು ಪ್ರೋತ್ಸಾಹದ ಬಗ್ಗೆ ಮೆಚ್ಚುಗೆಯ ಮಾತನಾಡಿದರು. ಸಮಾರಂಭದಲ್ಲಿ ಡಾ॥ ಸಿ. ನಂಜುಂಡಯ್ಯರವರು ಶ್ರೀ ಡಾ.ಕೆ.ಎಂ. ಮಹಾದೇವಯ್ಯ, ಶ್ರೀ ಡಾ॥ ನಾಗೇಂದ್ರರವರು, ಶ್ರೀ ಚನ್ನವೀರಪ್ಪ, ಶ್ರೀ ಉ.ವೇ. ವಿದ್ವಾನ್ ಡಾ॥ ಜಾನಕಿರಾಮ್‌ರವರು ಶ್ರೀ ನಾಗರಾಜಪ್ಪನವರು, ಶ್ರೀ ಹೆಚ್.ಎನ್. ರಾಮಕೃಷ್ಣರವರು ಸಂಘದ ಪ್ರ॥ ಕಾರ್ಯದರ್ಶಿ ಎಸ್.ಜಿ. ಘಟ್ನಟ್ಟಿ ಖಜಾಂಚಿ, ಎಸ್.ಎಸ್. ನೀಲಗುಂಜಿ, ಸಹ ಕಾರ್ಯದರ್ಶಿ, ಎಲ್ಲಾ ಪದಾಧಿಕಾರಿಗಳು, ವಲಯಸಂಯೋಜಕರು, ವಿಷಯ ಪರಿವೀಕ್ಷಕರು, ಜಿಲ್ಲಾಧ್ಯಕ್ಷರು ಎಲ್ಲಾ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ಸಂಘದ ವಾರ್ಷಿಕ ಸಾಮಾನ್ಯ ಮಹಾಸಭೆಯಲ್ಲಿ ಅಧ್ಯಕ್ಷರು ಕಾರ್ಯದರ್ಶಿಗಳು ಉಪಸ್ಥಿತರಿದ್ದು, ಆಯವ್ಯಯ ಮಂಡಣೆ ಮಾಡಿದರು. ಶಿಕ್ಷಕರಾದ ಶ್ರೀ ಮಹಾದೇವಯ್ಯನವರು ಶ್ರೀ ರಂಗರಾಜುರವರು ಸ್ವಾಗತಿಸಿದರು, ಶಿಕ್ಷಕರಾದ ಶ್ರೀ ಡಿ.ಹೆಚ್.ಗಂಗಣ್ಣನವರು ನಿರೂಪಿಸಿದರು.

# ೮ನೇ ಸ್ನಾತಕಪೂರ್ವ ದೀಕ್ಷಾಂತ ಸಮಾರೋಹ ಕಾರ್ಯಕ್ರಮದ ಉದ್ಘಾಟನೆ-2017-18

ವರದಿ: **ವಿದ್ವಾನ್ ನಾರಾಯಣಸ್ವಾಮಿ ಎಂ.ಎಸ್.**
ಸಂಶೋಧನಾ ಸಹಾಯಕರು, ಕಸಂವಿ




ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ವತಿಯಿಂದ 2017–18ನೇ ಸಾಲಿನ ಸ್ನಾತಕಪೂರ್ವ ದೀಕ್ಷಾಂತ ಕಾರ್ಯಕ್ರಮವನ್ನು ದಿನಾಂಕ: 16.11.2018ರಂದು ಕುವೆಂಪು ಕಲಾಕ್ಷೇತ್ರ, ಕಿಮ್ಸ್ ಆವರಣ, ವಿ.ವಿ.ಪುರಂ, ಬೆಂಗಳೂರು–560004 ಇಲ್ಲಿ ನಡೆಸಲು ನಿರ್ಧರಿಸಲಾಯಿತು. ಈ ಕಾರ್ಯಕ್ರಮಕ್ಕಿಂತ ಮುಂಚೆ ನಗರದ ವಿವಿಧ ಸಂಸ್ಕೃತ ಪಾಠಶಾಲೆಗಳ ವಿದ್ಯಾರ್ಥಿ – ವಿದ್ಯಾರ್ಥಿನಿಯರಿಂದ ಆಕರ್ಷಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಯಿತು. ಈ ಸಾಂಸ್ಕೃತಿಕ ಕಾರ್ಯಕ್ರಮಗಳ ನಿರೂಪಣೆ ವಿದುಷಿ. ಸಾವಿತ್ರಿ ಪೂಜಾರಿಯವರು ಮಾಡಿದರು. ನಂತರ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ. ಪದ್ಮಾಶೇಖರ್‌ರವರ ಅಧ್ಯಕ್ಷತೆಯಲ್ಲಿ ವಿದ್ವಾನ್. ಆರಾಧ್ಯ ಮತ್ತು ವಿದ್ವಾನ್ ಚಂದ್ರಶೇಖರ್ ಸಂಸ್ಕೃತ ಶಿಕ್ಷಕರು ಇವರ ವೇದಘೋಷದೊಂದಿಗೆ ಅತಿಥಿಗಳನ್ನು ಬರಮಾಡಿಕೊಂಡು, ವೇದಘೋಷ, ನಾಡಗೀತೆ ಹಾಡುವುದರ ಮೂಲಕ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮವನ್ನು ಪ್ರಾರಂಭಿಸುವುದರೊಂದಿಗೆ ಅಧ್ಯಕ್ಷರಾದ ಪ್ರೊ. ಪದ್ಮಾಶೇಖರ್, ಮಾನ್ಯ ಕುಲಪತಿಗಳು, ಕಸಂವಿ. ಇವರು ಮುಖ್ಯ ಅತಿಥಿಗಳ ಸಮ್ಮುಖದಲ್ಲಿ ದೀಪವನ್ನು ಬೆಳಗುಸುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳು, ಸಂಸ್ಕೃತ ಪಾಠಶಾಲೆಗಳ ವಿದ್ಯಾರ್ಥಿಗಳು, ಶಿಕ್ಷಕರು, ಕಸಂವಿ ಸಿಬ್ಬಂದಿ ವರ್ಗದವರು ಪತ್ರಿಕಾ ಮಾಧ್ಯಮದವರು ಸೇರಿ ಸುಮಾರು 700ಕ್ಕಿಂತ ಹೆಚ್ಚು ಜನರು ಕರ್ನಾಟಕ ರಾಜ್ಯದ ನಾನಾ ಭಾಗಗಳಿಂದ ಆಗಮಿಸಿ ಈ ಸ್ನಾತಕ ಪೂರ್ವದೀಕ್ಷಾಂತ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.




ಮಾನ್ಯ ಉಪಕುಲಸಚಿವರಾದ ವಿದ್ವಾನ್.ಆರ್ ಪ್ರಕಾಶ ಪಾಗೋಜಿ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ. ಇವರು ಈ ಕಾರ್ಯಕ್ರಮದಲ್ಲಿ ಭಾಗಿಯಾದ ಮುಖ್ಯ ಅತಿಥಿಗಳನ್ನು ಸ್ವಾಗತಿಸಿದರು. ಪ್ರೊ. ವಿ. ಗಿರೀಶ್‌ಚಂದ್ರ, ನಿರ್ದೇಶಕರು. ಸಂಸ್ಕೃತ ಶಿಕ್ಷಣ ನಿರ್ದೇಶನಾಲಯ. ಇವರು ಸಂಸ್ಕೃತ ನಿರ್ದೇಶನಾಲಯದ ಕಾರ್ಯ ಪ್ರಗತಿಯ ವರದಿಯನ್ನು ಸವಿಸ್ತಾರವಾಗಿ ಓದುವುದರ ಮೂಲಕ ತಮ್ಮ ಪ್ರಾಸ್ತಾವಿಕ ಭಾಷಣವನ್ನು ಮಾಡಿದರು.

ಈ ಕಾರ್ಯಕ್ರಮದ ಸಾರಸ್ವತ ಮುಖ್ಯ ಭಾಷಣಕಾರರಾಗಿ ಡಾ. ಎಸ್ ರಂಗನಾಥ್, ಖ್ಯಾತ ಹಿರಿಯ ಸಂಸ್ಕೃತ ವಿದ್ವಾಂಸರು, ಬೆಂಗಳೂರು. ಇವರು 2017–18ನೇ ಸಾಲಿನಲ್ಲಿ ರಾಜ್ಯದ ಅನುದಾನಿತ ಸಂಸ್ಕೃತ ಪಾಠಶಾಲೆಗಳಲ್ಲಿ ಸಂಸ್ಕೃತ ಶಿಕ್ಷಕರಾಗಿ ಸುಮಾರು ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರಾದ ಸುಮಾರು 17 ಜನ ನಿವೃತ್ತ ಶಿಕ್ಷಕರನ್ನು ಸನ್ಮಾನಿಸಿ ಗೌರವಿಸುವುದರ ಮೂಲಕ ಸಂಸ್ಕೃತಿ–ಸಂಸ್ಕಾರವೃದ್ಧಿಗೆ ಈ ಸಂಸ್ಕೃತ ಶಿಕ್ಷಣ ಅನಿವಾರ್ಯವಾಗಿದೆಂಬುದನ್ನು ಮಾತನಾಡುತ್ತಾ, ಸಂಸ್ಕೃತ ಸಾಹಿತ್ಯ ಚರಿತ್ರೆಯ ಬಗ್ಗೆ ಸವಿಸ್ತಾರವಾಗಿ ಮನವರಿಕೆ ಮಾಡಿಕೊಟ್ಟರು. ಹಾಗೆಯೇ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವು ಸಂಸ್ಕೃತ ಶಿಕ್ಷಣಕ್ಕೆ ಉತ್ತೇಜನ ನೀಡುತ್ತಾ, ಪ್ರಗತಿಯತ್ತ ಹೆಜ್ಜೆ ಇಡುತ್ತಿರುವುದು ಸಂತೋಷದ ಸಂಗತಿಯಾಗಿದೆಯೆಂದು ತಿಳಿಸಿದರು.

ರಾಜ್ಯದ ಸಂಸ್ಕೃತ ಪಾಠಶಾಲೆಗಳಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದವರಿಗೆ ಸನ್ಮಾನಿಸಿ ಗೌರವಿಸುವಂತಹ ಸಂಪ್ರದಾಯ ಬೆಳೆಸಿಕೊಂಡು



ಬಂದಿದ್ದು, ಈ ಸನ್ಮಾನ ಸಮಾರಂಭದಲ್ಲಿ 17 ಜನ ನಿವೃತ್ತ ಶಿಕ್ಷಕರಿಗೆ ಶಾಲು, ಹಾರ, ಸ್ಮರಣಿಕೆ, ಡ್ರೈಪ್ರೂಟ್ಸ್ ನೀಡುವುದರೊಂದಿಗೆ ಗೌರವ ಸನ್ಮಾನ ಮಾಡಲಾಯಿತು.

# 2017-18ನೇ ಸಾಲಿನಲ್ಲಿ ನಿವೃತ್ತಿಯಾದ ಶಿಕ್ಷಕರಿಗೆ ಸನ್ಮಾನ:




**ನಿವೃತ್ತ ಶಿಕ್ಷಕರ ಹೆಸರು ಮತ್ತು ವಿಳಾಸ:** ವಿದ್ವಾನ್ ಟಿ.ಸಿ. ಅಶ್ವತ್ಥಕುಮಾರ್ ಮನೋನ್ಮನಿ ಸಂಸ್ಕೃತ ಪಾಠಶಾಲೆ, ಬೆಂಗಳೂರು. ವಿದ್ವಾನ್ ಕೆ.ಎಸ್. ಮಹದೇವಯ್ಯ ವಿದ್ಯಾನಿವೇದಿತ ಸಂಸ್ಕೃತ ಪಾಠಶಾಲೆ, ಮಂಜುನಾಥ ನಗರ, ಬೆಂಗಳೂರು. ಶ್ರೀ ಎಂ. ಆರ್. ವೆಂಕಟೇಶ್‌ಮೂರ್ತಿ ಕರ್ನಾಟಕ ವಿದ್ಯಾ ಮತ್ತು ಸಾಂಸ್ಕೃತಿಕ ಸಂಘ ಸಂಸ್ಕೃತ ಪಾಠಶಾಲೆ, ನಂ. 13, 4ನೇ ಅಡ್ಡರಸ್ತೆ, ನಾಗಪ್ಪ ಬೀದಿ, ಪಿ.ಜಿ.ಹಳ್ಳಿ, ಬೆಂಗಳೂರು–03. ಶ್ರೀ ಮಹೇಶ್, ಸಿದ್ಧಾರ್ಥ ಸಂಸ್ಕೃತ ಪಾಠಶಾಲೆ, ಕೊತ್ತನೂರು, ಬೆಂಗಳೂರು. ಶ್ರೀ ಎಸ್.ಶಿವಣ್ಣ, ನಿರ್ವಾಣಸ್ವಾಮಿ ಸಂಸ್ಕೃತ ಪಾಠಶಾಲೆ, ದೇಗುಲಮಠ, ಕನಕಪುರ, ರಾಮನಗರ ಜಿಲ್ಲೆ. ಶ್ರೀ ಶಿವರುದ್ರಯ್ಯ, ನಿರ್ವಾಣಸ್ವಾಮಿ ಸಂಸ್ಕೃತ ಪಾಠಶಾಲೆ, ದೇಗುಲಮಠ, ಕನಕಪುರ, ರಾಮನಗರ ಜಿಲ್ಲೆ. ಶ್ರೀ ಆಂಜನಪ್ಪ, ಸಕೊಂಗಾಡಿಯಪ್ಪ ಸಂಸ್ಕೃತ ಪಾಠಶಾಲೆ, ವಿವೇಕಾನಂದ ರಸ್ತೆ, ದೊಡ್ಡಬಳ್ಳಾಪುರ. ಶ್ರೀ ಎಂ. ಎನ್. ನಾಗಭೂಷಣ, ಸಂಸ್ಕೃತ ಪಾಠಶಾಲೆ, ಕೇಡಲಸರ, ಹೊನ್ನೇಸರ ಅಂಚೆ, ಸಾಗರ ತಾ॥, ಶಿವಮೊಗ್ಗ ಜಿಲ್ಲೆ.–577417. ಶ್ರೀಮತಿ ಕೆ.ಎಂ. ಲಲಿತಾಕ್ಷಿದೇವಿ, ಉಜ್ಜಯಿನಿ ಜಗದ್ಗುರು ವಿದ್ಯಾಪೀಠ ಸಂಸ್ಕೃತ ಪಾಠಶಾಲೆ, ಉಜ್ಜಯಿನಿಮಠ, ಚಿತ್ರದುರ್ಗ. ಶ್ರೀ ಎಸ್.ಡಿ. ರೇಣುಕಪ್ರಸಾದ್,ಶ್ರೀ ಶಿವಕುಮಾರಸ್ವಾಮಿ ಸಂಸ್ಕೃತ ಪಾಠಶಾಲೆ, ಬಿ.ಹೆಚ್. ರಸ್ತೆ, ತುಮಕೂರು.–572102. ಶ್ರೀ ಹೆಚ್.ಎಸ್. ಬೆಟ್ಟಸಿದ್ದೇಗೌಡ, ಶ್ರೀ ವೀರಭದ್ರೇಶ್ವರ ಸಂಸ್ಕೃತ ಪಾಠಶಾಲೆ ಬೆಳ್ಳಾವಿ, ತುಮಕೂರು ತಾಲ್ಲೂಕು. ಶ್ರೀಮತಿ ಎನ್.ವಿ. ತಿಪ್ಪಾ, ಶಾರದಾ ಸಂಸ್ಕೃತ ಪಾಠಶಾಲೆ, ಕೋಟೇಕಲ್, ಬಾದಾಮಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ. ಶ್ರೀ ಎಂ.ಕೆ. ಕ್ಷೇತ್ರಪಾಲ, ಶ್ರೀ ಮಲ್ಲಿಕಾರ್ಜುನಸ್ವಾಮಿ ಸಂಸ್ಕೃತ ಪಾಠಶಾಲೆ, ಬೆಟ್ಟದಹಳ್ಳಿ, ಗುಬ್ಬಿ ತಾ॥, ತುಮಕೂರು ಜಿಲ್ಲೆ. ಶ್ರೀ ಶಂಕರಪ್ಪ ಬಸವಣ್ಣೆಪ್ಪ ಓಂಕಾರಿ ಶ್ರೀ ಶಂಕರ ಶಿವಚಾರ್ಯ ಸಂಸ್ಕೃತ ಪಾಠಶಾಲೆ, ಗಜೇಂದ್ರಗಡ, ರೋಣ ತಾಲ್ಲೂಕು, ಗದಗ ಜಿಲ್ಲೆ.582114. ಶ್ರೀ ವಿದ್ವಾನ್ ವಿ.ಎಲ್. ಹೆಗಡೆ, ಶ್ರೀ ಗಣೇಶ ಸಂಸ್ಕೃತ ಜೋತಿಷ್ಯ ಪಾಠಶಾಲೆ, 1469/1, 7ನೇ ಅಡ್ಡರಸ್ತೆ,

ಕೃಷ್ಣಮೂರ್ತಿಪುರಂ, ಮೈಸೂರು. ಶ್ರೀಮತಿ ವಿದುಷಿ ಎ. ಉಮಾದೇವಿ, ಗೋಪಾಲಕೃಷ್ಣ ಸಂಸ್ಕೃತ ಪಾಠಶಾಲೆ, ಕೊಣನೂರು, ಅರಕಲಗೂಡು ತಾ॥, ಹಾಸನ ಜಿಲ್ಲೆ. ಶ್ರೀ ವಿದ್ವಾನ್ ಶಂಕರಪ್ಪ ಗಂಗಪ್ಪ ಯಾದವಾಡ, ಶ್ರೀ ಅಮರವಾಣಿ ಸಂಸ್ಕೃತ ಪಾಠಶಾಲೆ, ಮಹಾಲಿಂಗಪೂರ, ಮುಧೋಳ ತಾಲ್ಲೂಕು. ಬಾಗಲಕೋಟೆ ಜಿಲ್ಲೆ–587312. ಇವರುಗಳ ಪಟ್ಟಿಯನ್ನು ವಿದ್ವಾನ್.ರಾಜಶೇಖರ ಕೆ.ಕೆ, ಯೋಜನಾ ಸಹಾಯಕರು, ಕಸಂವಿ. ಇವರು ಈ ಮೇಲಿನ ನಿವೃತ್ತ ಶಿಕ್ಷಕರ ಸಂಕ್ಷಿಪ್ತ ಪರಿಚಯ ಮಾಡಿಕೊಡುವುದರ ಮೂಲಕ ಓದಿದರು.

## ಅತ್ಯುತ್ತಮ ಸಾಧನೆ ಮಾಡಿದ ಸಂಸ್ಕೃತ ಪಾಠಶಾಲೆಗಳು



ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವು 8 ವರ್ಷಗಳಿಂದ ರಾಜ್ಯದಲ್ಲಿನ ಅನುದಾನಿತ ಸಂಸ್ಕೃತ ಪಾಠಶಾಲೆಗಳಲ್ಲಿ ಉತ್ತಮ ಶೈಕ್ಷಣಿಕ ಕಾರ್ಯ ಚಟುವಟಿಕೆಗಳನ್ನು ನಿರ್ವಹಿಸುತ್ತಿರುವಂತಹ ಪಾಠಶಾಲೆಗಳನ್ನು ಗುರುತಿಸಿ ಅತ್ಯುತ್ತಮ ಸಾಧನಾ ಪುರಸ್ಕಾರವನ್ನು ನೀಡುತ್ತಾ ಬಂದಿದೆ. ಅತ್ಯುತ್ತಮ ಸಾಧನೆ ಮಾಡಿದ ಪಾಠಶಾಲೆಗಳ ಪಟ್ಟಿಯನ್ನು ವಿದ್ವಾನ್. ತಿಮ್ಮಣ್ಣ ಆರ್. ಯೋಜನಾ ಸಹಾಯಕರು, ಕಸಂವಿ. ಇವರು ಓದಿದರು.

**ಬೆಂಗಳೂರು ವಲಯ:** ಪ್ರಥಮಾ –ಶ್ರೀ ಸಿದ್ಧಲಿಂಗೇಶ್ವರ ಸಂಸ್ಕೃತ ಪಾಠಶಾಲೆ, ನಾರಸಂದ್ರ, ಮಾಗಡಿ ತಾ॥. ಕಾವ್ಯ – ಸ್ವಜಾತ ಸಂಸ್ಕೃತ ಪಾಠಶಾಲೆ, ಉಲ್ಲಾಳು ಉಪನಗರ,ಬೆಂಗಳೂರು. ಸಾಹಿತ್ಯ – ರುದ್ರೇಶ್ವರ ಸಂಸ್ಕೃತ ಪಾಠಶಾಲೆ, ರಾಜಘಟ್ಟ, ದೊಡ್ಡಬಳ್ಳಾಪುರ ತಾ॥.

**ಚಿತ್ರದುರ್ಗ ವಲಯ:** ಪ್ರಥಮಾ – ಸಿದ್ಧಾರ್ಥ ಸಂಸ್ಕೃತ ಪಾಠಶಾಲೆ, ಮಧುಗಿರಿ, ತುಮಕೂರು ಜಿ॥. ಕಾವ್ಯ – ಉರಿಗದ್ದಿಗೇಶ್ವರ ಸಂಸ್ಕೃತ ಪಾಠಶಾಲೆ, ಬೆಟ್ಟಹಳ್ಳಿ ಮಠ, ಕುಣಿಗಲ್ ತಾ॥. ಸಾಹಿತ್ಯ – ಜಗದ್ಗುರು ಗುರುಬಸವೇಶ್ವರ ಸಂಸ್ಕೃತ ಪಾಠಶಾಲೆ, ಬೆಕ್ಕಿನ ಕಲ್ಮಠ, ಶಿವಮೊಗ್ಗ. ಮೈಸೂರು ವಲಯ ಪ್ರಥಮಾ – ಶ್ರೀಕಾಂತ ಸಂಸ್ಕೃತ ಪಾಠಶಾಲೆ, ಖಿಲ್ಲೆಮೊಹಲ್ಲಾ, ಮೈಸೂರು ಜಿಲ್ಲೆ. ಕಾವ್ಯ – ಶ್ರೀ ಫಲಾಹಾರ ಪ್ರಭುದೇವಸ್ವಾಮಿ ಸಂಸ್ಕೃತ ಪಾಠಶಾಲೆ, ಬಂಡಳ್ಳಿ, ಹನೂರು ತಾ॥. ಸಾಹಿತ್ಯ –ಶ್ರೀ ಆದಿಚುಂಚನಗಿರಿ ಸಂಸ್ಕೃತ ಪಾಠಶಾಲೆ, ಕುವೆಂಪುನಗರ, ಮೈಸೂರು.

**ಬೆಳಗಾವಿ ವಲಯ:** ಪ್ರಥಮಾ – ಶ್ರೀ ಸಮೀರ ಸಂಸ್ಕೃತ ಪಾಠಶಾಲೆ, ಹಲಗಣಿ, ವಿಜಯಪುರ. ಕಾವ್ಯ – ಶ್ರೀ ಸಿದ್ಧಲಿಂಗೇಶ್ವರ ಸಂಸ್ಕೃತ ಪಾಠಶಾಲೆ, ಶಿವಬಸವನಗರ, ಬೆಳಗಾವಿ: ಸಾಹಿತ್ಯ– ಮಲ್ಲಿಕಾರ್ಜುನಸ್ವಾಮಿ ಸಂಸ್ಕೃತ ಪಾಠಶಾಲೆ, ಬೇಲೂರು, ಬಾದಾಮಿ ತಾ॥.

**ಕಲುಬುರಗಿ ವಲಯ:** ಪ್ರಥಮಾ – ಗುರುಬಸವೇಶ್ವರ ಸಂಸ್ಕೃತ ಪಾಠಶಾಲೆ, ಮುಕ್ತಂಪುರ, ಕಲುಬುರಗಿ. ಕಾವ್ಯ – ಜಗದ್ಗುರು ರೇಣುಕಾಚಾರ್ಯ ಸಂಸ್ಕೃತ ಪಾಠಶಾಲೆ, ರೆಡ್ಡಿಬೀದಿ, ಬಳ್ಳಾರಿ.

**ಧಾರವಾಡ ವಲಯ:** ಪ್ರಥಮಾ – ಶ್ರೀ ಗೀರ್ವಾಣ ಭಾರತೀ ಸಂಸ್ಕೃತ ಪಾಠಶಾಲೆ, ರಾಣಿಬೆನ್ನೂರು, ಹಾವೇರಿ ಜಿಲ್ಲೆ. ಕಾವ್ಯ – ಶ್ರೀ ಭಾರತೀ ಸಂಸ್ಕೃತ ಪಾಠಶಾಲೆ, ಬೈರುಂಬೆ, ಉತ್ತರ ಕನ್ನಡ ಜಿಲ್ಲೆ. ಸಾಹಿತ್ಯ– ಗುರುಕುಲ ಸಂಸ್ಕೃತ ಪಾಠಶಾಲೆ, ಮಹೇಂದ್ರಕರಚಾಳ, ಧಾರವಾಡ.

ಪ್ರೊ. ಪದ್ಮಾಶೇಖರ್, ಮಾನ್ಯ ಕುಲಪತಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ. ಇವರು ಕಾರ್ಯಕ್ರಮದ ಅಧ್ಯಕ್ಷತೆ ಯನ್ನು ವಹಿಸಿ, ರಾಜ್ಯದ ಸಂಸ್ಕೃತ ಪಾಠಶಾಲೆಗಳಲ್ಲಿನ ಸಂಸ್ಕೃತ ಪ್ರಥಮಾ, ಕಾವ್ಯ, ಸಾಹಿತ್ಯ, ವಿದ್ಯಾರ್ಥಿಗಳಿಗೆ ಅನುಶಾಸನವನ್ನು ಬೋಧಿಸಿದರು. ನಂತರ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಸಂಸ್ಕೃತ ಶಿಕ್ಷಣದ ಅಭಿವೃದ್ಧಿಗೆ ಸಂಸ್ಕೃತ ವಿಶ್ವವಿದ್ಯಾಲಯವು ಹೆಚ್ಚಿನ ಪ್ರೋತ್ಸಾಹ ನೀಡುತ್ತಿದ್ದು, ಸರ್ಕಾರ ಈ ಸಂಸ್ಕೃತ ಶಿಕ್ಷಣದ ಕಡೆ ಹೆಚ್ಚಿನ ಒತ್ತು ಕೊಟ್ಟು ಅನುದಾನ ಬಿಡುಗಡೆ ಮಾಡಿದರೆ ಸಮರ್ಪಕವಾಗಿ ಕೆಲಸ ಕಾರ್ಯಗಳು ಉತ್ತಮವಾಗಿ ನಡೆಸಬಹುದೆಂದು ಅಭಿಪ್ರಾಯಪಟ್ಟರು.

ಈ ಕಾರ್ಯಕ್ರಮದಲ್ಲಿ ಸಂಸ್ಕೃತ ವಿಶ್ವವಿದ್ಯಾಲಯದ ಡೀನ್‌ಗಳು, ಸಹ ಪ್ರಾಧ್ಯಾಪಕರು, ಅಧಿಕಾರಿಗಳು, ಸಹಾಯಕ ಪ್ರಾಧ್ಯಾಪಕರು, ಸಂಶೋಧನಾ ಸಹಾಯಕರು, ಬೋಧಕೇತರ ಸಿಬ್ಬಂದಿಗಳು, ರಾಜ್ಯದ ನಾನಾ ಕಡೆಗಳಿಂದ ಆಗಮಿಸಿದ ಅತಿಥಿಗಳು ಹಾಗೂ ಸುಮಾರು 500ಕ್ಕೂ ಅಧಿಕ ಸಂಸ್ಕೃತ ಶಿಕ್ಷಕರು ಸ್ನಾತಕಪೂರ್ವ ದೀಕ್ಷಾಂತ ಸಮಾರೋಹದಲ್ಲಿ ಭಾಗವಹಿಸಿದರು. ಈ ಕಾರ್ಯಕ್ರಮದ ವಂದನಾರ್ಪಣೆಯನ್ನು ಡಾ. ಪ್ರಭುಸ್ವಾಮಿ ಸಹಾಯಕ ಪ್ರಾಧ್ಯಾಪಕರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಇವರು ನಡೆಸಿ ಕೊಡುವುದರ ಮೂಲಕ ಶಾಂತಿ ಮಂತ್ರದೊಂದಿಗೆ ಮುಕ್ತಾಯಗೊಳಿಸಿದರು. ಕಾರ್ಯಕ್ರಮವನ್ನು ವಿದುಷಿ. ತೇಜಸ್ವಿನಿ ಬಿದರಿ, ಸಂಶೋಧನಾ ಸಹಾಯಕರು, ಕಸಂವಿ. ಮತ್ತು ಡಾ. ರಾಮಕೃಷ್ಣ ಭಟ್ಟ, ಸಹಾಯಕ ಪ್ರಾಧ್ಯಾಪಕರು, ಕಸಂವಿ. ಇವರು ನಿರೂಪಿಸಿದರು.

ಹಾಗೆಯೇ ಈ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಲು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.

# ಕರ್ನಾಟಕ ರಾಜ್ಯ ಸಂಸ್ಕೃತ ಕಾಲೇಜು ಬೋಧಕ ಮತ್ತು ಬೋಧಕೇತರ ಸಂಘದ ರಾಷ್ಟ್ರೀಯ ಸಂಗೋಷ್ಠಿ-2018

ವರದಿ: **ಡಾ. ಮಂಜುನಾಥ ಭಟ್ಟ**
ಕಾರ್ಯದರ್ಶಿ, ಕ.ರಾ.ಸಂ.ಕಾ.ಬೋ/ಬೋಧಕೇತರ ಸಂಘ,
ಬೆಂಗಳೂರು




ಶಾಸ್ತ್ರಾರ್ಥಗೋಷ್ಠೀ, ಸಂಸ್ಕೃತ ಸಂಭಾಷಣ ಶಿಬಿರ, ಸಂಸ್ಕೃತಜ್ಞರಿಗೆ ಸಮ್ಮಾನ, ರಾಜ್ಯ ಮತ್ತು ರಾಷ್ಟ್ರಸ್ತರೀಯ ಸಂಗೋಷ್ಠೀ ಇವೇ ಮೊದಲಾದ ಕಾರ್ಯಕ್ರಮಗಳ ಮೂಲಕ ರಾಜ್ಯದೆಲ್ಲೆಡೆ ಸಂಸ್ಕೃತ ಜ್ಞಾನ ದಾಸೋಹವನ್ನು ನಡೆಸುವ ಉದ್ದೇಶದಿಂದ ಸ್ಥಾಪಿಸಲ್ಪಟ್ಟು, ಹಿರಿಯ ವಿದ್ವಾಂಸರ ಮಾರ್ಗದರ್ಶನದಲ್ಲಿ ವಿವಿಧ ಸಂಸ್ಕೃತ ಕಾರ್ಯ ಚಟುವಟಿಕೆಗಳನ್ನು ನಡೆಸುತ್ತಾ ಮುನ್ನಡೆಯುತ್ತಿರುವ ಕರ್ನಾಟಕ ಸಂಸ್ಕೃತ ಕಾಲೇಜುಗಳ ಬೋಧಕ ಮತ್ತು ಬೋಧಕೇತರರ ಸಂಘವು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಮತ್ತು ಪೂರ್ಣಪ್ರಜ್ಞ ವಿದ್ಯಾಪೀಠ ಬೆಂಗಳೂರು ಇವರ ಸಹಯೋಗದೊಂದಿಗೆ 2019ರ ಜನೆವರಿ 11& 12ರಂದು ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್, ಚಾಮರಾಜಪೇಟೆ, ಬೆಂಗಳೂರು ಇಲ್ಲಿ ರಾಷ್ಟ್ರಿಯ ಸಂಗೋಷ್ಠಿಯನ್ನು ನಡೆಸಿತು. ಜಿಜ್ಞಾಸುಗಳಲ್ಲಿ ಸಂಶೋಧನಾತ್ಮಕ ಬುದ್ಧಿಯ ಬೆಳವಣಿಗೆ, ಕಾವ್ಯತತ್ತ್ವಗಳ ಅರಿವು, ಸಾಹಿತ್ಯಾಭಿರುಚಿ ಹಾಗೂ ಸಾಹಿತ್ಯಲೋಕದ ವೈವಿಧ್ಯತೆಯ ಅರಿವು ಮೂಡಿಸುವ ಸದುದ್ದೇಶದಿಂದ ಬಾಣಭಟ್ಟನ ಕಾವ್ಯಗಳನ್ನು ಆಧರಿಸಿ "ಬಾಣಭಟ್ಟಕೃತಿಷು ಲೋಕ-ಶಾಸ್ತ್ರದರ್ಶನಮ್" ಎಂಬ ಶೀರ್ಷಿಕೆಯಡಿಯಲ್ಲಿ ಈ ಗೋಷ್ಠಿಯನ್ನು ನಡೆಸಲಾಯಿತು.

ಪ್ರೊ.ಎಂ.ಎನ್.ಜೋಶಿ ಇವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಅವರು ಕಾವ್ಯಪ್ರಪಂಚದ ಸೃಷ್ಟಿಕರ್ತೃವಾದ ಕವಿಪ್ರಜಾಪತಿಯಿಂದ ರಚಿತವಾದ ಕಾವ್ಯಗಳು ವೈವಿಧ್ಯಮಯವಾದ ಅರ್ಥಗಳಿಂದ ಕೂಡಿರುತ್ತಿದ್ದು ಪ್ರತಿ ಬಾರಿ ಓದುವಾಗ ಹಲವು ವಿಧದ




ಅರ್ಥಗಳನ್ನು ಹೊರಚಿಮ್ಮುತ್ತವೆ. ಅಂತಹ ಕಾವ್ಯಗಳಲ್ಲಿ ಒಂದಾದ ಬಾಣನ ಕಾದಂಬರಿಯು ಸಾರ್ವಕಾಲಿಕ ಸತ್ಯವಾದ,ಲೋಕಹಿತವಾದ,ಸನಾತನ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಹಲವಾರು ವಿಷಯಗಳನ್ನು ಸೂಚಿಸುತ್ತದೆ. ಬಾಣನು ಪೂರ್ವಾರ್ಜಿತಕರ್ಮ ಮತ್ತು ಪುನರ್ಜನ್ಮದ ಕಲ್ಪನೆಯನ್ನು ಕಾದಂಬರಿಯಲ್ಲಿ ಸುಂದರವಾಗಿ ನಿರೂಪಿಸಿರುವುದನ್ನು ಕಾಣಬಹುದು ಎಂದರು. ಪ್ರಾಸ್ತಾವಿಕವಾಗಿ ಮಾತನಾಡಿದ ಡಾ.ಎನ್.ಲಕ್ಷ್ಮೀನಾರಾಯಣ ಭಟ್ಟ ಪ್ರಾಚಾರ್ಯರು, ಎಸ್.ಎಮ್.ಎಸ್.ಪಿ ಉಡುಪಿ ಇವರು ರಾಷ್ಟ್ರಿಯಸಂಗೋಷ್ಠಿಯ ಉದ್ದೇಶ ಮತ್ತು ಬಾಣಭಟ್ಟನ ಕೃತಿಗಳಾದ ಕಾದಂಬರಿ, ಹರ್ಷಚರಿತೆ, ಚಂಡೀಶತಕ ಇವುಗಳಲ್ಲಿರುವ ಕಾವ್ಯವೈಶಿಷ್ಟ್ಯವನ್ನು ವಿಮರ್ಶಾತ್ಮಕವಾಗಿ ಗುರುತಿಸುವ ಅವಶ್ಯಕತೆಯನ್ನೂ ಮತ್ತು ಕಾವ್ಯಗಳಲ್ಲಿರುವ ಲೋಕೋಪಯೋಗಿ ತತ್ತ್ವಗಳನ್ನು ಚರ್ಚಾಗೋಷ್ಠಿಗಳ ಮೂಲಕ ಲೋಕಕ್ಕೆ ಶ್ರುತಪಡಿಸುವ ಉದ್ದೇಶವನ್ನೂ ವಿವರಿಸಿದರು. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ, ನಿವೃತ್ತರಾದ ಡಾ.ಎಂ.ಶಿವಕುಮಾರಸ್ವಾಮಿ ಇವರು ದಿಕ್ಸೂಚಿ ಭಾಷಣವನ್ನು ಮಾಡುತ್ತಾ 'ಗದ್ಯಕೃತಿಯೇ' ಶ್ರೇಷ್ಠ ಎಂದು ಹಿರಿಯರ ಮಾತಿದೆ. ಬಾಣನ ಕೃತಿಗಳನ್ನು ಅವಲೋಕಿಸಿದಾಗ ನಮಗೆ ಆ ಮಾತಿನ ಗಾಂಭೀರ್ಯದ ಅರಿವಾಗುತ್ತದೆ. ಗ್ರೀಕ್ ಗದ್ಯಗಳು ನಿರಾಡಂಬರವಾಗಿದ್ದರೆ, ಸಂಸ್ಕೃತದ ಗದ್ಯಗಳು ಅಲಂಕಾರ ಭೂಯಿಷ್ಠವಾಗಿದ್ದು ಪುನಃ ಪುನಃ ಪಠಿಸುವಂತೆ ಪ್ರೇರೇಪಿಸುತ್ತವೆ. ಬಾಣನು ದೀರ್ಘದೀರ್ಘ ಸಮಾಸಭೂಯಿಷ್ಠವಾದ ವಾಕ್ಯಗಳಿಂದ ಅಲಂಕೃತವಾದ ತನ್ನ ಗದ್ಯಕಾವ್ಯಗಳಲ್ಲಿ ಹಲವಾರು ಜೀವನೋನ್ನತಿಕಾರಕವಾದ ವಿಷಯಗಳನ್ನು ಸೂಚಿಸಿದ್ದಾನೆ. ವಿವಿಧ ಶಾಸ್ತ್ರೀಯ ವಿಚಾರಗಳು ಇವನ ಕಾವ್ಯಗಳಲ್ಲಿ ಹಾಸುಹೊಕ್ಕಾಗಿವೆ ಎನ್ನುತ್ತಾ ಹಲವಾರು ಉದಾಹರಣೆಗಳ ಮೂಲಕ ಸ್ಪಷ್ಟಪಡಿಸಿದರು. ಮೈಸೂರು ಸಂಸ್ಕೃತ ಕಾಲೇಜಿನ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಶ್ರೀನಿವಾಸಮೂರ್ತಿ ಇವರು ಕಾದಂಬರಿಯು ಎಲ್ಲಾ ತರಹದ ವಿಷಯಗಳ ಹೂರಣವಾಗಿ ಓದುಗರನ್ನು ಸೂಜಿಗಲ್ಲಿನಂತೆ ಆಕರ್ಷಿಸುತ್ತದೆ. ಅದರಲ್ಲಿರುವ ಪಾತ್ರಗಳು ಜನರ ವಿವಿಧ ಸ್ವಭಾವಗಳನ್ನು ಸುಂದರವಾಗಿ ಚಿತ್ರಿಸುತ್ತವೆ ಎಂದು ಹೇಳಿದರು. ಹಾಗೇ ಇದೇ ಸಂದರ್ಭದಲ್ಲಿ ಸಂಘದ ಅಧ್ಯಕ್ಷರಾದ ಡಾ.ನಾಗೇಂದ್ರ ಇವರು ಬರೆದ ಕೃತಿಗಳಾದ ಶೂದ್ರಕನ ಅಮೋಘ ಪಾತ್ರಗಳು ಮತ್ತು ಮೃಚ್ಛಕಟಿಕದ ಸೂಕ್ತಿ ರತ್ನಗಳು ಎಂಬ ಪುಸ್ತಕವನ್ನು ಲೋಕಾರ್ಪಣೆಗೊಳಿಸಿದರು. ಕರ್ನಾಟಕ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಾದ ಪ್ರೊ.ವ್ಹಿ. ಗಿರೀಶ್‌ಚಂದ್ರರವರು ಈ ಸಂಘವು ಪ್ರತಿವರ್ಷ ಸಂಸ್ಕೃತ ಸಾಹಿತ್ಯ ಕೃತಿಗಳ ಸಂಗೋಷ್ಠಿಗಳನ್ನು ನಡೆಸುತ್ತಿರುವುದು ಶ್ಲಾಘನೀಯವಾಗಿದ್ದು, ಇದರಿಂದ ಸಾಹಿತ್ಯದ ತತ್ತ್ವಗಳನ್ನು ತಿಳಿಯಲು ಸಹಕಾರಿಯಾಗುತ್ತದೆ. ಸಂಸ್ಕೃತ ಪ್ರೇಮಿಗಳು, ವಿದ್ವಾಂಸರು ಮತ್ತು ವಿದ್ಯಾರ್ಥಿಗಳು ಇದರ ಪ್ರಯೋಜನವನ್ನು ಹೊಂದಬೇಕೆಂದು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ.ಪದ್ಮಾಶೇಖರ್ ಇವರು ಬಾಣನ ಸಾಹಿತ್ಯವು ಕನ್ನಡ ಸಾಹಿತಿಗಳ ಮೂಲ ಆಕರಗ್ರಂಥವಾಗಿದೆ. ನಾಗವರ್ಮನ, ಪಂಪ, ರನ್ನರ ಕಾವ್ಯಪರಂಪರೆಗೆ ಬಾಣಭಟ್ಟನ ಗದ್ಯವು ಅಮೋಘ ಕೊಡುಗೆಯನ್ನು ನೀಡಿದೆ. ಅದರಲ್ಲಿಯೂ ಆತನು ಬರೆದ ಹರ್ಷಚರಿತವು ನೈಜ ಸಾಹಿತ್ಯದ ಸ್ಪಷ್ಟವಾದ ನಿರೂಪಣೆಯಾಗಿದೆ. ಅದರಲ್ಲಿರುವ ಯುದ್ಧ ಸನ್ನಿವೇಶಗಳು, ಅಧಿಕಾರಕ್ಕಾಗಿ ನಡೆಯುವ ತಂತ್ರಗಳು ಇವೆಲ್ಲವನ್ನು ಸಮಕಾಲೀನ ದೃಷ್ಟಿಯಿಂದ ನೋಡಿದಾಗ ಪ್ರಸ್ತುತದ ರಾಜಕೀಯ ಸ್ಥಿತಿಯಲ್ಲಿ ಬಾಣಭಟ್ಟನ ಯೋಚನೆಗಳು ಸಮಂಜಸವಾಗಿವೆ. ಜೈನಸಿದ್ಧಾಂತದ ಪುನರ್ಜನ್ಮದ ಕರ್ಮಫಲಗಳು ಕಾದಂಬರಿಯಲ್ಲಿ ಬರುವ ಗಿಳಿಯ ಕಥೆಯಿಂದ ತಿಳಿಯಲ್ಪಡುತ್ತವೆ. ವ್ಯಕ್ತಿಯು ಸದಾ ಸ್ಫೂರ್ತಿದಾಯಕ ಜೀವನವನ್ನು ಸಾಗಿಸಲು ಪ್ರೀತಿಸುವ ಮತ್ತು ಪ್ರೀತಿಸಿಕೊಳ್ಳುವ ಸ್ವಭಾವವನ್ನು ಅಂತರ್ಗತ




ಮಾಡಿಕೊಂಡಿರಬೇಕು ಎನ್ನುತ್ತಾ ಕೋಶ ಓದು, ದೇಶ ಸುತ್ತು ಎನ್ನುವ ಗಾದೆಯಂತೆ ಏನು ತಿಳಿಯದ ಸ್ಥಿತಿಯಿಂದ ಸರ್ವಜ್ಞ ಸ್ಥಿತಿಗೆ ಹೋದ ನಿದರ್ಶನವೇ ಮಹಾಕವಿ ಬಾಣನ ಶ್ರೇಷ್ಠತೆ ಎಂದು ಹೇಳಿದರು. ವಿದ್ವಾನ್ ಸೂರ್ಯನಾರಾಯಣ ಭಟ್ಟ ಸಹಾಯಕಪ್ರಾಧ್ಯಾಪಕರು ಸಿ. ಎಲ್. ವಾಯ್ ಸಂಸ್ಕೃತ ಕಾಲೇಜು ಧಾರವಾಡ ಇವರು ಕಾರ್ಯಕ್ರಮವನ್ನು ನಿರೂಪಿಸಿದರು. ಸಂಘದ ಅಧ್ಯಕ್ಷರಾದ ಡಾ.ನಾಗೇಂದ್ರ ಇವರು ಸ್ವಾಗತಿಸಿದರೆ ಸಂಘದ ಕಾರ್ಯದರ್ಶಿಗಳಾದ ಡಾ.ಮಂಜುನಾಥ ಭಟ್ಟ ಇವರು ವಂದಿಸಿದರು. ವಿದ್ವಾನ್ ರಾಜೇಶಶಾಸ್ತ್ರೀ ಸಹಾಯಕ ಪ್ರಾಧ್ಯಾಪಕರು ಶ್ರೀ ಶ್ರೀಮಾತಾ ಸಂಸ್ಕೃತ ಕಾಲೇಜು ಉಮ್ಮಚಗಿ ಇವರು ವೇದಘೋಷ ಮಾಡಿದರು. ಮೊದಲನೆಯ ಸತ್ರವು ವಿದ್ವಾನ್ ಡಿ.ಎಸ್. ಚಂದ್ರಶೇಖರಯ್ಯ ನಿವೃತ್ತ ಪ್ರಾಚಾರ್ಯರು ಎಸ್.ಎಸ್.ವಿ.ಎಸ್. ಕಾಲೇಜು ಸಿದ್ಧಗಂಗಾಮಠ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಡಾ॥ ಎಚ್.ವೆಂಕಟೇಶಪ್ಪ ಸಹಾಯಕಪ್ರಾಧ್ಯಾಪಕರು, ಸರಕಾರಿ ಮಹಾವಿದ್ಯಾಲಯ ಬೆಂಗಳೂರು ಇವರು "ಬಾಣಸ್ಯ ಕಾದಂಬರ್ಯಾಂ ಪರಿಸರಚಿತ್ರಣಮ್" ಎಂಬ ವಿಷಯದಲ್ಲಿಯೂ,

ಡಾ॥ ಆರತೀ ವಿ.ಬಿ. ಸಂಸ್ಥಾಪಕಾಧ್ಯಕ್ಷರು, ವಿಭು ಅಕಾಡೆಮಿ ಬೆಂಗಳೂರು ಇವರು "ಕಾದಂಬರ್ಯಾಂ ಪ್ರತಿಬಿಂಬಿತಾನಿ ಜೀವನಮೌಲ್ಯಾನಿ" ಎಂಬ ವಿಷಯದಲ್ಲಿಯೂ ಸ್ವೀಯಪ್ರಬಂಧವನ್ನು ಮಂಡಿಸಿದರು. ಎರಡನೆಯ ಸತ್ರವು ಡಾ.ಎಚ್.ಸತ್ಯನಾರಾಯಣರಾವ್ ಪ್ರಾಚಾರ್ಯರು ಪೂರ್ಣಪ್ರಜ್ಞ ವಿದ್ಯಾಪೀಠ ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಡಾ॥ ರಾಮಕೃಷ್ಣಪೆಜತ್ತಾಯ ಸಹಾಯಕ ಪ್ರಾಧ್ಯಾಪಕರು ಚಿನ್ಮಯ ವಿಶ್ವವಿದ್ಯಾಪೀಠ ಕೊಚ್ಚಿ ಕೇರಳ ಇವರು "ಬಾಣಭಟ್ಟಕೃತಿಷು ಜ್ಯೋತಿಷದರ್ಶನಮ್" ಎಂಬ ವಿಷಯದಲ್ಲಿಯೂ, ಡಾ॥ ಸಿ.ರಂಗನಾಥನ್, ಪ್ರಾಧ್ಯಾಪಕರು, ರಾ.ಸಂ.ವಿದ್ಯಾಪೀಠ ತಿರುಪತಿ ಇವರು "ಕಾದಂಬರ್ಯಾಮ್ ಅಲಂಕಾರ ಸೌಂದರ್ಯ ಪರಾಮರ್ಶಃ" ಎಂಬ ವಿಷಯದಲ್ಲಿಯೂ ಸ್ವೀಯ ಪ್ರಬಂಧವನ್ನು ಮಂಡಿಸಿದರು. ಮೂರನೆಯ ಸತ್ರವು ಪ್ರೋ.ವಿ.ಗಿರೀಶಚಂದ್ರ ಡೀನ್, ಭಾಷಾನಿಕಾಯ, ಕ.ಸಂ.ವಿ. ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿಯೂ, ನಾಲ್ಕನೇ ಸತ್ರವು ಡಾ.ಕೃಷ್ಣಮೂರ್ತಿ ಜಿ ಕೂರ್ಸೆ ಪ್ರಾಚಾರ್ಯರು, ಎಸ್.ಕೆ.ಎಸ್.ವಿ.ಎ.ಕಾಲೆಜು ಆದಿಚುಂಚನಗಿರಿ ಇವರ ಅಧ್ಯಕ್ಷತೆಯಲ್ಲಿಯೂ ನಡೆಯಿತು. ಈ ಗೋಷ್ಠಿಗಳಲ್ಲಿ ವಿದ್ವಾನ್ ಗಣೇಶ ವಿಷ್ಣು ಭಟ್ಟ ಪ್ರಾಚಾರ್ಯರು, ಎಸ್.ಆರ್.ಬಿ.ಎಸ್.ಕಾಲೇಜು ಹೊನ್ನಾವರ, ವಿದ್ವಾನ್ ರಮಾಕಾಂತ ಜೋಶಿ ಪ್ರಾಚಾರ್ಯರು, ಎಸ್.ಎಲ್.ಎಸ್.ಕಾಲೇಜು ಜಮಖಂಡಿ ಹಾಗೂ ವಿದ್ವಾನ್ ನರಸಿಂಹ ಭಟ್ಟ ಪ್ರಾಚಾರ್ಯರು, ಆರ್.ಆರ್.ಎಸ್. ಕಾಲೇಜುಸ್ವರ್ಣವಲ್ಲೀ ಇವರು ಉಪಸ್ಥಿತರಿದ್ದರು. ಈ ಎರಡೂ ಗೋಷ್ಠಿಗಳಲ್ಲಿ ವಿವಿಧ ಪ್ರದೇಶಗಳಿಂದ ಆಗಮಿಸಿದ ಪ್ರಾಧ್ಯಾಪಕರು ಹಾಗೂ ಸಂಶೋಧನ ವಿದ್ಯಾರ್ಥಿಗಳು ತಮ್ಮ ತಮ್ಮ ಶೋಧಪ್ರಬಂಧವನ್ನು ಮಂಡಿಸಿದರು. 12.01.2019 ರಂದು ಬೆಳಿಗ್ಗೆ ಐದನೇಯ ಸತ್ರವು ವಿದ್ವಾನ್ ರಾಮಚಂದ್ರ ಭಟ್ಟ ಪ್ರಾಚಾರ್ಯರು, ಎಸ್.ಎಮ್.ಎಸ್.ಕಾಲೇಜು ಉಮ್ಮಚಗಿ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಡಾ.ಚಂದ್ರಕಲಾ ಆರ್.ಕೊಂಡಿ ಸಹಾಯಕ ಪ್ರಾಧ್ಯಾಪಕರು, ರಾ.ಗಾ.ಪರಿಸರ ಶೃಂಗೇರಿ ಇವರು "ಕಾದಂಬರ್ಯಾಂ ಪ್ರತಿಬಿಂಬಿತಃ ರಾಜಧರ್ಮಃ" ಎಂಬ ವಿಷಯದಲ್ಲಿ ಸ್ವೀಯ ಪ್ರಬಂಧವನ್ನು ಮಂಡಿಸಿದರು. ಆರನೇಯ ಸತ್ರವು ಡಾ.ವೀರನಾರಾಯಣ ಪಾಂಡುರಂಗಿ ಡೀನ್, ಕ.ಸಂ.ವಿ. ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಂಸ್ಕೃತ ಕವಿಗಳೂ ಮನೋವೈದ್ಯರೂ ಆದ ಡಾ.ಶಂಕರ ರಾಜಾರಾಮನ್ ಇವರು "ಬಾಣಭಟ್ಟಕೃತಿಷು ಕವಿಸಮಯಪ್ರಯೋಗಾಃ" ಎಂಬ ವಿಷಯದಲ್ಲಿಯೂ, ಡಾ.ಶಂಕರ ಭಟ್ಟ ಪ್ರಾಧ್ಯಾಪಕರು, ಆರ್.ಆರ್.ಎಸ್. ಕಾಲೇಜು ಸ್ವರ್ಣವಲ್ಲೀ ಇವರು "ಬಾಣಭಟ್ಟಕೃತಿಷು ದಾರ್ಶನಿಕವಿಚಾರಾಃ" ಎಂಬ ವಿಷಯದಲ್ಲಿಯೂ ಸ್ವೀಯಪ್ರಬಂಧವನ್ನು ಮಂಡಿಸಿದರು. ಏಳನೇಯ ಸತ್ರವು ವಿದ್ವಾನ್ ಶ್ರೀಧರ ಶಾಸ್ತ್ರೀ ಇನಾಮದಾರ




ಪ್ರಾಚಾರ್ಯರು, ಸಿ.ಎಲ್.ವಾಯ್.ಸಂಸ್ಕೃತ ಕಾಲೇಜು ಧಾರವಾಡ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸತ್ರದಲ್ಲಿ ವಿವಿಧ ಪ್ರದೇಶದಿಂದ ಆಗಮಿಸಿದ ಪ್ರಾಧ್ಯಾಪಕರು ವಿವಿಧ ವಿಷಯುಗಳಲ್ಲಿ ಶೋಧಪ್ರಬಂಧವನ್ನು ಮಂಡಿಸಿದರು. ಮಧ್ಯಾಹ್ನ 2.30ಕ್ಕೆ ಸರಿಯಾಗಿ ರಾಷ್ಟ್ರಿಯ ಸಂಗೋಷ್ಠಿಯ ಮಂಗಲೋತ್ಸವ ಕಾರ್ಯಕ್ರಮವು ನಡೆಯಿತು. ಪ್ರೋ.ಎಸ್ ರಾಮರತ್ನಮ್ ಕುಲಪತಿಗಳು ಜಗದ್ಗುರು ಕೃಪಾಲು ವಿಶ್ವವಿದ್ಯಾಲಯ ಒಡಿಸ್ಸಾ ಇವರು ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡುತ್ತಾ ಬಾಣ ಒಬ್ಬ ಮಹಾನ್ ಕವಿ. ಬಾಣೋಚ್ಛಿಷ್ಟಂ ಜಗತ್ಸರ್ವಂ ಎಂಬ ವಿದ್ವಾಂಸರ ಉದ್ಗಾರ ಬಾಣನ ಕಾವ್ಯಗಳನ್ನು ಅವಲೋಕಿಸಿದವರಿಗೆ ಅರ್ಥವಾಗದೇ ಇರದು. ಬಾಣ ಸಾಮಾಜಿಕ, ಧಾರ್ಮಿಕ ಹಾಗೂ ಐತಿಹಾಸಿಕತತ್ತ್ವಗಳನ್ನು ತನ್ನ ಕಾವ್ಯಗಳಲ್ಲಿ ಸ್ಫುಟವಾಗಿ ಚಿತ್ರಿಸಿದ್ದಾನೆ ಎಂದು ಹೇಳಿ ಬಾಣನ ಕಾವ್ಯಗಳಲ್ಲಿನ ಐತಿಹಾಸಿಕ ಅಂಶಗಳನ್ನು ಉದಾಹರಣೆಗಳ ಮೂಲಕ ಸುಂದರವಾಗಿ ನಿರೂಪಿಸಿದರು. ಮುಖ್ಯ ಅಭ್ಯಾಗತರಾಗಿ ಭಾಗವಹಿಸಿದ ವಿದ್ವಾನ್ ಪಿ.ಆರ್.ಪಾಗೋಜಿ ಉಪಕುಲಸಚಿವರು ಹಾಗೂ ಹಣಕಾಸು ಅಧಿಕಾರಿಗಳು ಕ.ಸಂ.ವಿ.ಬೆಂಗಳೂರು ಇವರು ಮಾತನಾಡುತ್ತಾ ಸಂಸ್ಕೃತ ಸಾಹಿತ್ಯ ಕ್ಷೇತ್ರದಲ್ಲಿ ಬಾಣನ ಕೊಡುಗೆ ಅಪಾರವಾದದು, ಬಾಣನ ವ್ಯಕ್ತಿತ್ವವನ್ನು ಮತ್ತು ಅಗಾಧವಾದ ಪಾಂಡಿತ್ಯವನ್ನು ಅವನ ಕಾವ್ಯಗಳಲ್ಲಿ ಕಾಣಬಹುದು ಎಂದರು. ಡಾ॥ ಜಾನಕಿರಾಮ್, ರಾಜ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ಧಾರ್ಮಿಕ ದತ್ತಿದೇವಾಲಯಗಳ ಅರ್ಚಕರ ಮತ್ತು ಆಗಮಿಕರ ಸಂಘ ಬೆಂಗಳೂರು, ವಿದ್ವಾನ್ ಸಿ.ಎನ್.ಚಂದ್ರಶೇಖರಯ್ಯ, ಅಧ್ಯಕ್ಷರು, ಪಾಠಶಾಲಾ ಶಿಕ್ಷಕರ ಸಂಘ ಹಾಗೂ ಮತ್ತಿತರ ಗಣ್ಯರು ಪಾಲ್ಗೊಂಡಿದ್ದರು. ವಿದ್ವಾನ್ ಮಹೇಶ ಭಟ್ಟ ಸಹಾಯಕ ಪ್ರಾಧ್ಯಾಪಕರು ಎಸ್.ಎಮ್.ಎಸ್.ಕಾಲೇಜು ಉಮ್ಮಚಗಿ ಇವರು ಕಾರ್ಯಕ್ರಮವನ್ನು ನಿರೂಪಿಸಿದರು. ಸಂಘದ ಸದಸ್ಯರಾದ ವಿದ್ವಾನ್ ನಾಗರಾಜ ಭಟ್ಟ ಇವರು ಸ್ವಾಗತಿಸಿದರೆ, ಸಹಕಾರ್ಯದರ್ಶಿಗಳಾದ ಡಾ.ತಿರುಮಲ ಕುಲಕರ್ಣಿ ಇವರು ವಂದಿಸಿದರು. ವಿದ್ವಾನ್ ಪ್ರಶಾಂತ ಎಚ್.ಎಸ್. ಎಸ್.ಎಸ್.ವಿ.ಎಸ್ .ಕಾಲೇಜು ಸಿದ್ಧಗಂಗಾಮಠ ಇವರು ವೇದಘೋಷವನ್ನು ಮಾಡಿದರು. ಸಂಘದ ಉಪಾಧ್ಯಕ್ಷರಾದ ವಿದ್ವಾನ್ ನಿರಂಜನಮೂರ್ತಿ ಎಸ್.ಎಸ್. ಇವರು ಸಂಘದ ಕಾರ್ಯಚಟುವಟಿಕೆಗಳನ್ನು ತಿಳಿಸಿದರು. ಸಂಘದ ಖಜಾಂಚಿಯಾದ ವಿದ್ವಾನ್ ವಿ.ಎಲ್.ಯರಗಟ್ಟಿ ಸದಸ್ಯರಾದ ವಿದ್ವಾನ್ ದೇವರಾಜು ಎಸ್,ಶ್ರೀ ಹರಿಕೃಷ್ಣರಾವ್ ಎ, ಶ್ರೀ ಎಮ್.ಬಿ ಕದಂ ಇವರುಗಳು ವಿವಿಧ ಗೋಷ್ಠಿಗಳ ದಾಯಿತ್ವವನ್ನು ಸ್ವೀಕರಿಸಿ ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸಿದರು. ದೇಶದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಹಾಗೂ ಶಿಕ್ಷಣಸಂಸ್ಥೆಗಳಲ್ಲಿ ಸೇವೆಸಲ್ಲಿಸುತ್ತಿರುವ ಸುಮಾರು 150ಕ್ಕೂ ಹೆಚ್ಚು ಜನ ವಿದ್ವಾಂಸರು ಈ ಗೋಷ್ಠಿಯಲ್ಲಿ ಭಾಗವಹಿಸಿದ್ದರು. ಮಾನವನ, ಸಮಾಜದ ಮತ್ತು ದೇಶದ ಅಭಿವೃದ್ಧಿಗೆ ಪೂರಕವಾದ ವಿಷಯುಗಳಿಂದ ವಿಸ್ತೃತವಾದ ಬಾಣಭಟ್ಟಮಹಾಕವಿಯ ಕಾವ್ಯಗಳನ್ನು

ವಿವಿಧ ಆಯಾಮಗಳಿಂದ ಪರಿಶೀಲಿಸಿ ಅಲ್ಲಿರುವ ಲೌಕಿಕ, ಶಾಸ್ತ್ರೀಯ ಮತ್ತು ದಾರ್ಶನಿಕ ವಿಚಾರಗಳನ್ನು ಸಂಗ್ರಹಿಸಿ ಕಾವ್ಯತತ್ವಗಳನ್ನು ವಿಮರ್ಶಿಸಲಾಯಿತು. ಲೋಕದ ಜನತೆಗೆ ಅವುಗಳಲ್ಲಿರುವ ಶಾಸ್ತ್ರೀಯ, ಮೌಲಿಕ, ಧಾರ್ಮಿಕ, ಸಾಮಾಜಿಕ, ವೈಜ್ಞಾನಿಕ, ಐತಿಹಾಸಿಕ ಹಾಗೂ ಆಧ್ಯಾತ್ಮಿಕ ವಿಷಯಗಳನ್ನು ಶ್ರುತಪಡಿಸುವ ಸುಮಾರು 55ಕ್ಕೂ ಹೆಚ್ಚು ಶೋಧಪ್ರಬಂಧಗಳು ಮಂಡಿಸಲ್ಪಟ್ಟವು. ಈ ಕಾರ್ಯಕ್ರಮದಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಬೋಧಕ–ಬೋಧಕೇತರ ವೃಂದ, ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಸಂಸ್ಕೃತ ಕಾಲೇಜುಗಳ ಹಾಗೂ ಇತರಕಾಲೇಜುಗಳ ಪ್ರಾಚಾರ್ಯರು ಬೋಧಕ–ಬೋಧಕೇತರ ವೃಂದ ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ರಾಷ್ಟ್ರಿಯಸಂಗೋಷ್ಠಿಯು ವಿಶ್ವವಿದ್ಯಾಲಯದ, ವಿದ್ಯಾಪೀಠದ ಹಾಗೂ ಸಂಘದ ಸದಸ್ಯರೆಲ್ಲರ ಸಹಕಾರದಿಂದ ಯಶಸ್ವಿಯಾಗಿ ಪೂರ್ಣಗೊಂಡಿತು.

# ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ವತಿಯಿಂದ ರಾಜ್ಯಮಟ್ಟದ ಸಂಸ್ಕೃತ ಸ್ಪರ್ಧೆಗಳು

ವರದಿ: **ವಿದ್ವಾನ್. ರಾಜಶೇಖರ್ ಕೆ.ಕೆ.**
ಸಂಶೋಧನಾ ಸಹಾಯಕರು, ಕಸಂವಿ.




ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವು ನಡೆಸುವ ರಾಜ್ಯಮಟ್ಟದ ಸ್ಪರ್ಧೆಗಳ ಸಮಾರೋಪ ಸಮಾರಂಭವು ದಿನಾಂಕ: 19.01.2019ರ ಶನಿವಾರ ಅಪರಾಹ್ನ 2.30ಕ್ಕೆ 'ಶ್ರೀ ಕಬೀರಾನಂದಾಶ್ರಮ, ಕರುವಿನಕಟ್ಟೆ, ಚಿತ್ರದುರ್ಗ' – ಇಲ್ಲಿ ನಡೆಯಿತು. ಸಮಾರಂಭದ ದಿವ್ಯಸಾನ್ನಿಧ್ಯವನ್ನು ಶ್ರೀ ಸದ್ಗುರು ಕಬೀರಾನಂದಾಶ್ರಮದ ಶ್ರೀ ಶ್ರೀ ಶಿವಲಿಂಗಾನಂದ ಮಹಾಸ್ವಾಮಿಗಳು ವಹಿಸಿದ್ದರು. ಚಿತ್ರದುರ್ಗದ ಸರ್ಕಾರಿ ಕಲಾ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಡಾ. ಕರಿಯಪ್ಪ ಮಾಳಗಿ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಸ್ಪರ್ಧೆಗಳಲ್ಲಿ ವಿಜೇತರಾದ ಮಕ್ಕಳಿಗೆ ಪುರಸ್ಕಾರಗಳನ್ನು ನೀಡಿದರು. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ. ಪದ್ಮಾಶೇಖರ್ ಅವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು.

ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಾದ ಪ್ರೊ. ಪಿ. ಗಿರೀಶ್‌ಚಂದ್ರ ಅವರು ಪ್ರಾಸ್ತಾವಿಕ ನುಡಿಗಳನ್ನಾಡಿ, ಸಂಸ್ಕೃತಕ್ಕೂ ವಿಜ್ಞಾನಕ್ಕೂ ಇರುವ ನಿಕಟ ಸಂಬಂಧವನ್ನು ಉದಾಹರಣೆಗಳ ಮೂಲಕ ಮಕ್ಕಳಿಗೆ ತಿಳಿಸಿದರು. ವಿದ್ಯಾರ್ಥಿಗಳು ಸಂಸ್ಕೃತ ಭಾಷೆಯನ್ನು ಗಮನವಿಟ್ಟು ಆಲಿಸಿ, ಸತತವಾಗಿ ಮನನ ಮಾಡಿಕೊಂಡಾಗ ಅದನ್ನು ಸುಲಭವಾಗಿ ಕಲಿಯಬಹುದು ಎಂದರು. ರಾಜ್ಯ ಸರ್ಕಾರದ ಆರನೇ ವೇತನ ಆಯೋಗದಂತೆ ವೇತನವನ್ನು ಅನುದಾನಿತ ಶಾಲೆಗಳ ಪೈಕಿ ರಾಜ್ಯದಲ್ಲಿಯೇ ಮೊದಲು ಪಡೆದವರು ಸಂಸ್ಕೃತ ಪಾಠಶಾಲಾ ಶಿಕ್ಷಕರು ಎಂದು ಹೇಳಿದರು.

ಸ್ಪರ್ಧೆಗಳಲ್ಲಿ ವಿಜೇತರಾದ ಮಕ್ಕಳಿಗೆ ಪುರಸ್ಕಾರಗಳನ್ನು ನೀಡಿ ಮಾತನಾಡಿದ ಡಾ. ಕರಿಯಪ್ಪ ಮಾಳಗಿ ಅವರು,

'ಇದೊಂದು ಅವಿಸ್ಮರಣೀಯ ದಿನ ಮತ್ತು ಕ್ಷಣ. ಸಂಸ್ಕೃತವು ಬಹಳ ಪ್ರಾಚೀನ ಭಾಷೆಯಾಗಿದೆ. ಕನ್ನಡಕ್ಕೆ ಸಾಕಷ್ಟು ಶಕ್ತಿಯನ್ನು ಕೊಟ್ಟಿರುವ ಭಾಷೆ ಸಂಸ್ಕೃತ ಭಾಷೆ. ಹಾಗಾಗಿ ಈ ಭಾಷೆಯನ್ನು ಉಳಿಸಿ, ಬೆಳೆಸಬೇಕು. ಸಂಸ್ಕೃತದಲ್ಲಿ ಮಾತನಾಡಿದಾಗ ಆ ಭಾಷೆಗೆ ಜೀವ ಬರುತ್ತದೆ ಎಂದು ಹೇಳಿದರು. ಹಾಗಾಗಿ ಹೆಚ್ಚು ಜನರು ಸಂಸ್ಕೃತವನ್ನು ಮಾತನಾಡುವ ಹಾಗೆ ಮಾಡಬೇಕು. ಸಂಸ್ಕೃತವು ಭಾರತೀಯ ಭಾಷೆಗಳಿಗೆ ತಾಯಿ ಭಾಷೆಯಾಗಿದೆ. ಶ್ರೇಷ್ಠ ಭಾಷೆಯೂ ಹೌದು. ಅನೇಕ ವಿದ್ವಾಂಸರು ಅವಧೂತರ ಬಗ್ಗೆ ಸಂಶೋಧನೆ ಮಾಡಿದ್ದು, ಅವಧೂತರ ಪರಿಚಯ, ಸಾಹಿತ್ಯಗಳ ವಿವರ ಲಭ್ಯವಾಗಿರುವುದೇ ಸಂಸ್ಕೃತ ಭಾಷೆಯಲ್ಲಿ. ಸಂಸ್ಕೃತ ಸಾಹಿತ್ಯ ಬಹುಮಹತ್ತರ ಸಾಹಿತ್ಯವಾಗಿದೆ ಎಂದು ಹೇಳಿದರು. ಈ ಕಾರ್ಯಕ್ರಮದಲ್ಲಿ ಭಾಗವಹಿಸಿರುವುದು ನನಗೆ ಬಹಳ ಸಂತೋಷವಾಗಿದೆ. ಸಂಸ್ಕೃತವನ್ನು ಎಲ್ಲರೂ ಅಧ್ಯಯನ ಮಾಡೋಣ ಎಂದು ಕರೆ ನೀಡಿದರು. ಹಾಗೆಯೇ ಸಂಸ್ಕೃತದ ಮುಖಾಂತರ ಸಮಾಜಮುಖಿ ಕಾರ್ಯಗಳು ಆಗಲೆಂದು ಹಾರೈಸುವುದಾಗಿ ತಿಳಿಸಿದರು.

ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಕುಲಪತಿಗಳಾದ ಪ್ರೊ. ಪದ್ಮಾಶೇಖರ್ ಅವರು ಸಂಸ್ಕೃತ ಭಾಷೆಯ ಮಹತ್ವವನ್ನು ತಿಳಿಸಿದರು. 'ನಮ್ಮ ಮಾತೃಭಾಷೆ ತೆಲುಗು. ನನ್ನ ಭಾಷೆಗೆ ಪುಷ್ಟಿಯನ್ನು ಕೊಟ್ಟಿರುವುದು ಸಂಸ್ಕೃತ ಭಾಷೆ. ನಮ್ಮ ಓದು ನಮ್ಮ ಬೆಳವಣಿಗೆಗೆ ಕಾರಣವಾಗುತ್ತದೆ. ನೀವೀಗ ಸಂಸ್ಕೃತ ಭಾಷೆಯನ್ನು ಕಲಿಯುತ್ತಿದ್ದೀರಿ. ಅದನ್ನು ಚೆನ್ನಾಗಿ ಕಲಿಯಿರಿ. ಹಿಂದಿ, ಕನ್ನಡ, ಇಂಗ್ಲಿಷ್ ಕಲಿತವರಲ್ಲಿ ನಿರುದ್ಯೋಗದ ಸಮಸ್ಯೆ ಕಾಣುತ್ತಿದೆ. ಆದರೆ ಸಂಸ್ಕೃತ ಕಲಿತವರು ಪ್ರಾಯಶಃ ಎಲ್ಲರೂ ನಿರುದ್ಯೋಗ ಸಮಸ್ಯೆಯಿಂದ ಮುಕ್ತರಾಗಿದ್ದಾರೆ. ಸಂಸ್ಕೃತ ಕಲಿತರೆ ಎಲ್ಲವೂ ನಮಗೆ ಸಿಗುತ್ತದೆ. ಅದು ಸಂಸ್ಕೃತ ಭಾಷೆಗಿರುವ ಸಾಮರ್ಥ್ಯ. ಅಧ್ಯಾಪಕರು ಸಂಸ್ಕೃತವನ್ನು ಹೆಚ್ಚು ಹೆಚ್ಚು ಉಪಯೋಗಿಸಿದರೆ ಜೀವನನಿರ್ವಹಣೆ ತುಂಬಾ ಚೆನ್ನಾಗಿ ಮಾಡಬಹುದು. ಒಂದು ಭಾಷೆಯನ್ನು ಇನ್ನೊಂದು ಭಾಷೆಗೆ ಅನುವಾದ ಮಾಡಿ, ತಮ್ಮ ಜ್ಞಾನವನ್ನು ಬೆಳೆಸಿಕೊಳ್ಳಿ ಎಂದು ಕರೆ ನೀಡಿದರು. ಶಿಕ್ಷಕರು ಚಂದಮಾಮ, ನೀತಿಕಥೆಗಳನ್ನು ಮಕ್ಕಳಿಗೆ ಬೋಧಿಸಬೇಕು. ಇದರ ಜೊತೆಗೆ ರಾಮಾಯಣ, ಮಹಾಭಾರತದ ಅಧ್ಯಯನ ಮಾಡಿ, ಇವುಗಳಲ್ಲಿರುವ ಅನೇಕ ವಿಷಯಗಳನ್ನು ಮಕ್ಕಳಿಗೆ ತಿಳಿಸಬೇಕು. ಮಕ್ಕಳಿಗೆ ಕನ್ನಡದ ಜೊತೆಜೊತೆಗೆ ಸಂಸ್ಕೃತವನ್ನೂ ಕಲಿಸಬೇಕು. ಶಿಕ್ಷಕರೂ ಸಹ ಸಂಸ್ಕೃತ ಭಾಷೆಯನ್ನು ಚೆನ್ನಾಗಿ ಅಧ್ಯಯನ ಮಾಡಿಕೊಂಡು ಮಕ್ಕಳಿಗೆ ಕಲಿಸಬೇಕು. ಅನೇಕ ಸಮಸ್ಯೆಗಳ ನಡುವೆ ಸಂಸ್ಕೃತದ ಕೆಲಸ ಮಾಡಬೇಕು. ಆಗ ನಮ್ಮ ವೃತ್ತಿಗೆ ಬೆಲೆ ಸಿಗುತ್ತದೆ. ನಾನು ರಾಜ್ಯದ ಎಲ್ಲಾ ಸಂಸ್ಕೃತ ಶಿಕ್ಷಕರ ಪ್ರೀತಿಯನ್ನು ಗಳಿಸಿದ್ದೇನೆ. ಸಂಸ್ಕೃತದ ಕೆಲಸವನ್ನು ಸಾಕಷ್ಟು ಮಾಡಿದ್ದೇನೆ. ಸಂಸ್ಕೃತ ಶಿಕ್ಷಕರಿಗೆ ಆರನೇ ವೇತನ ಆಯೋಗದ ವೇತನವನ್ನು ರಾಜ್ಯದಲ್ಲಿಯೇ ಪ್ರಥಮವಾಗಿ ಪಾವತಿಸಲಾಗಿದೆ ಎಂದು ತಿಳಿಸಿದರು.

ವಿಶ್ವವಿದ್ಯಾಲಯದಲ್ಲಿ ತರಗತಿಗಳನ್ನು ನಡೆಸಲು ಕೊಠಡಿಗಳನ್ನು ನಿರ್ಮಿಸಲಾಗುತ್ತಿದೆ. ಹಾಗೆಯೇ ಬೆಂಗಳೂರು ಮತ್ತು ಮೈಸೂರಿನಲ್ಲಿ ವಿದ್ಯಾರ್ಥಿಗಳಿಗಾಗಿ ಹಾಸ್ಟೆಲ್‌ಗಳನ್ನು ನಿರ್ಮಿಸಲಾಗುತ್ತಿದ್ದು, ಹಣವನ್ನು ಬಿಡುಗಡೆ ಮಾಡಲಾಗಿದೆ. ಸಂಸ್ಕೃತ ವಿಶ್ವವಿದ್ಯಾಲಯವನ್ನು ನಾವೆಲ್ಲರೂ ಸೇರಿ ಬಹಳ ದೊಡ್ಡ ಮಟ್ಟದಲ್ಲಿ ಬೆಳೆಸಬೇಕಾಗಿದೆ ಎಂದರು. 'ಮಕ್ಕಳೇ ನೀವು ಎಷ್ಟು ಚೆನ್ನಾಗಿ ಸಂಸ್ಕೃತವನ್ನು ಅಭ್ಯಾಸ ಮಾಡುತ್ತೀರೋ ಅಷ್ಟೇ ಚೆನ್ನಾಗಿ ನಿಮ್ಮ ಜೀವನವು ರೂಪುಗೊಳ್ಳುತ್ತದೆ' ಎಂದು ಹೇಳಿ ವಿದ್ಯಾರ್ಥಿಗಳಿಗೆ ಸಂಸ್ಕೃತಾಧ್ಯಯನ ಕೈಗೊಳ್ಳುವಂತೆ ಕರೆನೀಡಿದರು.

ಸಮಾರಂಭದ ಕೊನೆಗೆ ಶ್ರೀ ಶ್ರೀ ಶಿವಲಿಂಗಾನಂದ ಮಹಾಸ್ವಾಮಿಗಳು ಆಶೀರ್ವಚನವನ್ನು ನೀಡಿ, ಸಂಸ್ಕೃತ ನಮ್ಮೆಲ್ಲರ ಹೃದಯಭಾಷೆಯಾಗಿದೆ. ಸಂಸ್ಕೃತದಲ್ಲಿ ಹೇಗೆ ಸಂಭಾಷಣೆ ಮಾಡುತ್ತೇವೆಯೋ ಹಾಗೆಯೇ ಬರೆಯುತ್ತೇವೆ ಕೂಡ. ನಮ್ಮ ಋಷಿಮುನಿಗಳು ಸಂಸ್ಕೃತವನ್ನು ನಮಗೆ ನೀಡಿದ್ದಾರೆ. ಇತರೆ ಭಾಷೆಗಳು ಬೇರೆ ಬೇರೆ ಪ್ರದೇಶಗಳಲ್ಲಿ ಬದಲಾವಣೆಗಳು ಕಾಣಿಸುತ್ತವೆ. ಆದರೆ ಸಂಸ್ಕೃತ ಎಲ್ಲಿ ಹೋದರೂ ಒಂದೇ ಆಗಿರುತ್ತದೆ. ಸರ್ಕಾರದಲ್ಲಿ ಇರುವಂತಹ ಸೌಲಭ್ಯಗಳು ಸಂಸ್ಕೃತ ಶಿಕ್ಷಕರಿಗೆ ದೊರೆಯಬೇಕಾಗಿದೆ. ಆದಿಚುಂಚನಗಿರಿಯ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿಯವರ ಆದೇಶದಂತೆ ಇಲ್ಲಿನ ಶ್ರೀಗಳು 1983ರಲ್ಲಿ ಸಂಸ್ಕೃತ ಪಾಠಶಾಲೆಯನ್ನು ತೆರೆದರು. ಅದು



ನಮಗೆ ಶ್ರೀಗಳ ಆಶೀರ್ವಾದವಾಗಿದೆ ಎಂದು ಹೇಳಿದರು. ಸಂಸ್ಕೃತವನ್ನು ಎಲ್ಲರೂ ಕಲಿಯೋಣ, ಸಂಸ್ಕೃತಕ್ಕೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡಿ ಬೆಳೆಸಿ ಎಂದು ಕರೆ ನೀಡಿದರು.

ಕಾರ್ಯಕ್ರಮದ ನಿರೂಪಣೆಯನ್ನು ಚಿತ್ರದುರ್ಗ ವಲಯದ ವಿಷಯ ಪರಿವೀಕ್ಷಕರಾದ ವಿದ್ವಾನ್ ಹೆಚ್.ಬಿ. ಗಂಗಾಧರಯ್ಯನವರು ನಡೆಸಿಕೊಟ್ಟರು. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಯೋಜನಾ ಸಹಾಯಕರಾದ ವಿದ್ವಾನ್ ರಾಜಶೇಖರ್ ಕೆ.ಕೆ. ರವರು ಅತಿಥಿಗಳನ್ನು ಸ್ವಾಗತಿಸಿದರು. ವಂದನಾರ್ಪಣೆಯನ್ನು ಮೈಸೂರು ವಿಭಾಗದ ವಿಷಯ ಪರಿವೀಕ್ಷಕರಾದ ಶ್ರೀ ಪರಶಿವಮೂರ್ತಿ ಅವರು ನಡೆಸಿಕೊಟ್ಟರು. ಕಾರ್ಯಕ್ರಮ ದಲ್ಲಿ ಎಲ್ಲಾ ವಿಭಾಗಗಳ ವಲಯ ಸಂಯೋಜಕರು ಹಾಗೂ ವಿಷಯ ಪರಿವೀಕ್ಷಕರು ಭಾಗವಹಿಸಿ, ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಕೊನೆಗೆ, ಶಾಂತಿಮಂತ್ರದೊಂದಿಗೆ ಕಾರ್ಯಕ್ರಮವನ್ನು ಸಮಾಪ್ತಗೊಳಿಸಲಾಯಿತು.

**ರಾಜ್ಯ ಮಟ್ಟದ ಸ್ಪರ್ಧೆಗಳು–2018–19, ಅಮರಕೋಶ ಕಂಠಪಾಠ – ಪ್ರಥಮಾ**

| ಕ್ರ.ಸಂ. | ಬಹುಮಾನಿತ ವಿದ್ಯಾರ್ಥಿ ಮತ್ತು ಶಾಲೆಯ ಹೆಸರು | ಪಡೆದ ಬಹುಮಾನ | ಮೊತ್ತ |
|---|---|---|---|
| 1. | **ಸುನೇತ್ರ ಎಮ್.ಕೆ.** ಸಂಸ್ಕೃತ ಪಾಠಶಾಲೆ, ಮತ್ತೂರು, ಶಿವಮೊಗ್ಗ ಜಿಲ್ಲೆ | ಪ್ರಥಮ | 1000.00 |
| 2. | **ಶಿವಗಣೇಶ ಭಟ್ಟ,** ಲಕ್ಷ್ಮೀನರಸಿಂಹ ಸಂಸ್ಕೃತ ಪಾಠಶಾಲೆ ಸಾಲ್ಕಣಿ, ಶಿರಸಿ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ | ದ್ವಿತೀಯ | 800.00 |
| 3. | **ಚನ್ನಬಸವ ಎಸ್ ಬಿನ್ ಶ್ರೀಮಂತ,** ಶ್ರೀ ಕಾಲಭೈರವೇಶ್ವರ ಸಂಸ್ಕೃತ ವೇದ ಪಾಠಶಾಲೆ. ಶ್ರೀ ಆದಿಚುಂಚನಗಿರಿ ಕ್ಷೇತ್ರ, ನಾಗಮಂಗಲ ತಾ॥, ಮಂಡ್ಯ ಜಿ–571811 | ತೃತೀಯ | 600.00 |
| | **ಪ್ರಬಂಧ – ಕಾವ್ಯ** | | |
| 1. | **ಅಮೃತಾ ಹೆಗಡೆ,** ಭಾರತೀ ಸಂಸ್ಕೃತ ಪಾಠಶಾಲೆ ಭೈರುಂಬೆ–581401, ಶಿರಸಿ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ | ಪ್ರಥಮ | 1500.00 |
| 2. | **ಶಿವಾನಂದ ಬಿರದಾರ,** ಶ್ರೀ ಪರದೇಶಿಕೇಂದ್ರ ವಿದ್ಯಾಪೀಠ ಸಂಸ್ಕೃತ ಪಾಠಶಾಲೆ, ರಂಗಾಪುರ–572201, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ. | ದ್ವಿತೀಯ | 1000.00 |
| 3. | **ರೋಹಿತ್ ಪರಾಡರ್,** ನಾಗಲಿಂಗಸ್ವಾಮಿ ಸಂಸ್ಕೃತ ಪಾಠಶಾಲೆ ಆಲಂಗಾರು, ಮೂಡಬಿದರೆ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ. | ತೃತೀಯ | 800.00 |
| | **ಭಾಷಣಮ್ – ಸಾಹಿತ್ಯ** | | |
| 1. | **ಅನಂತ ಶಾಸ್ತ್ರೀ,** ಲಕ್ಷ್ಮೀನರಸಿಂಹ ಸಂಸ್ಕೃತ ಪಾಠಶಾಲೆ ಸಾಲ್ಕಣಿ, ಶಿರಸಿ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ | ಪ್ರಥಮ | 2000.00 |
| 2. | **ಶ್ರೀನಾಥ ಎಲ್,** ಕೆ.ಎಸ್.ಎಸ್. ಸಂಸ್ಕೃತ ಪಾಠಶಾಲೆ ವಾಣಿವಿಲಾಸ ರಸ್ತೆ, ಮೈಸೂರು–570004. | ದ್ವಿತೀಯ | 1500.00 |
| 3. | **ಚನ್ನಬಸವ ಬಿನ್ ಮಹದೇವಪ್ಪ,** ಶ್ರೀ ಕಾಲಭೈರವೇಶ್ವರ ಸಂಸ್ಕೃತ ವೇದ ಪಾಠಶಾಲೆ. ಶ್ರೀ ಆದಿಚುಂಚನಗಿರಿ ಕ್ಷೇತ್ರ, ನಾಗಮಂಗಲ ತಾ॥, ಮಂಡ್ಯ ಜಿ–571811 | ತೃತೀಯ | 1000.00 |

# ಮಹಿಳೆ ಮತ್ತು ಕಾನೂನು ಜಾಗೃತಿಯ ವಿಚಾರಗೋಷ್ಠಿ ಹಾಗೂ ಅಕ್ಕಮಹಾದೇವಿ ಗ್ರಂಥ ಬಿಡುಗಡೆ ಸಮಾರಂಭ

ವರದಿ: **ಡಾ. ಅನುಪಮಾ ಬಿ.**
ಸಹಾಯಕ ಪ್ರಾಧ್ಯಾಪಕರು, ಕಸಂವಿ



ಇಂದಿನ ಪ್ರಸ್ತುತ ವಿದ್ಯಮಾನವನ್ನು ಗಮನಿಸಿದರೆ "ಯತ್ರ ನಾರ್ಯಸ್ತು ಪೂಜ್ಯನ್ತೆ ತತ್ರ ರಮಂತೇ ದೇವತಾಃ" ಎಂದು ಸಾರುವ ಭಾರತೀಯ ಸಂಸ್ಕೃತಿಯಲ್ಲಿ ಇದು ಕೇವಲ ಪುಸ್ತಕಗಳಿಗೆ ಸೀಮಿತವಾಗಿದೆಯೋ ಏನೋ ಎಂದು ತೋರುತ್ತಿದೆ. ಈ ಪರಿಸ್ಥಿತಿಗೆ ಕಾರಣಗಳನ್ನು ಮತ್ತು ಸಮಸ್ಯೆಗಳ ಸ್ವರೂಪ ಮತ್ತು ಪರಿಹಾರಗಳನ್ನು ಚರ್ಚಿಸಲು ದಿನಾಂಕ 07.02.2019ರಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಕರ್ನಾಟಕ ಲೇಖಕಿಯರ ಸಹಯೋಗದೊಂದಿಗೆ ಮೇಲುಕೋಟೆಯ ಸಂಸ್ಕೃತ ಸಂಶೋಧನಾ ಸಂಸತ್ತಿನ ಆವರಣದಲ್ಲಿ "ಅಕ್ಕಮಹಾದೇವಿ" ಸಂಸ್ಕೃತ ಆವೃತ್ತಿಯ ಬಿಡುಗಡೆ ಮತ್ತು ಕಸಂವಿಯ "ಮಹಿಳಾ ದೌರ್ಜನ್ಯ ತಡೆ ಸಮಿತಿಯ" ವತಿಯಿಂದ ರಾಜ್ಯಮಟ್ಟದ ಒಂದುದಿನದ ವಿಚಾರಗೋಷ್ಠಿಯು ಆಯೋಜಿಸಿತ್ತು. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಹಮ್ಮಿಕೊಂಡಿರುವ ಅಕ್ಕಮಹಾದೇವಿ ಕೃತಿಯ ಬಿಡುಗಡೆ ಹಾಗು ಮಹಿಳೆ ಮತ್ತು ಕಾನೂನು ಜಾಗೃತಿ ಎಂಬ ವಿಷಯವನ್ನಾಧರಿಸಿ ಒಂದುದಿನದ ವಿಚಾರಗೋಷ್ಠಿ ಯ ಉಧ್ಘಾಟನೆಯ ಸಲುವಾಗಿ ಆಗಮಿಸಿರುವ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ



ಪ್ರೊ.ಪದ್ಮಾಶೇಖರ್ ಅವರು, ಶ್ರೀಮತಿ ರಾಣಿ ಸತೀಶ್ ಅವರು, ಡಾ.ಬಸವರಾಜ ಸಾದರ ಅವರು ಈ ದಿನ ಸನ್ಮಾನಗೊಳ್ಳುತ್ತಿರುವ ಲೇಖಕರಾದ ಡಾ.ಎಚ್.ವಿ ನಾಗರಾಜರಾವ್ ಮತ್ತು ಶ್ರೀಮತಿ ಲೀಲಾದೇವಿ ಆರ್ ಪ್ರಸಾದ್ ಅವರು ಮತ್ತು ಕರ್ನಾಟಕ ಲೇಖಕಿಯರ ಸಂಘದ ಅದ್ಯಕ್ಷರಾದ ಶ್ರೀಮತಿ ವನಮಾಲಾ ಸಂಪನ್ನಕುಮಾರ್ ಅವರ ಎಲ್ಲರೂ ವೇದಿಕೆಯನ್ನು ಅಲಂಕರಿಸಿದರು. ಕೋರುತ್ತಾ ಕಾರ್ಯಕ್ರಮದ ಪ್ರಾರಂಭವನ್ನು "ಮಹಿಳಾ ದೌರ್ಜನ್ಯ ತಡೆ ಸಮಿತಿಯ"ಯ ಸದಸ್ಯ ಕಾರ್ಯದರ್ಶಿಗಳಾದ ಡಾ.ಅನುಪಮಾ ಬಿ ಅವರು ಮಾಡಿದರು. ಅಕ್ಕಮಹಾದೇವಿ ಕೃತಿಯನ್ನು ರಚಿಸಿದವರು ಅಕ್ಕಮಹಾದೇವಿಯ ಬಗ್ಗೆ ಅನೇಕ ಸಂಶೋಧನೆಗಳನ್ನು ಕೈಗೊಂಡು ಅನೇಕ ಮಾಹಿತಿಗಳನ್ನು ಜನರಿಗೆ ತಲುಪಿಸುವ ಕಾರ್ಯದಲ್ಲಿ ಇಂದಿಗೂ ತಮ್ಮನ್ನು ತೊಡಗಿಸಿಕೊಂಡಿರುವ ಶ್ರೀಮತಿ ಡಾ.ಲೀಲಾದೇವಿ ಆರ್. ಪ್ರಸಾದ್ ಅವರು ಇವರು ಮಾಜಿ ಸಚಿವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಈ ಕೃತಿಯು ಕನ್ನಡ ಭಾಷೆಯಲ್ಲಿದೆ. ಆ ಕೃತಿಯನ್ನು ಸಂಸ್ಕೃತ ಭಾಷೆಗೆ ಅನುವಾದವನ್ನು ಸಂಸ್ಕೃತ ಸಾಹಿತ್ಯಕ್ಷೇತ್ರದಲ್ಲಿ ತಮ್ಮದೇ ಆದ ಪ್ರತ್ಯೇಕ ಛಾಪನ್ನು ಮೂಡಿಸಿರುವ ರಾಷ್ಟ್ರಪತಿ ಪ್ರಶಸ್ತಿ ಪುರಸ್ಕೃತರಾದ ಡಾ.ಎಚ್.ವಿ.ನಾಗರಾಜರಾವ್ ಅವರು. ಹಾಗೆಯೇ ಅಕ್ಕಮಹಾದೇವಿ ಕೃತಿಯ ಬಗ್ಗೆ ಮಾತನಾಡಲು ಈ ದಿನ ಸಮಾರಂಭಕ್ಕೆ ಆಗಮಿಸಿರುವ ಶ್ರೀ ಬಸವರಾಜು ಸಾದರ ಅವರು ಆಕಾಶವಾಣಿಯಲ್ಲಿ ಪ್ರಸಿದ್ಧ ವಾಗ್ಮಿಗಳು. ನಮ್ಮ ಕರೆಗೆ ಓಗೊಟ್ಟು ಉದ್ಘಾಟನಾ ಸಮಾರಂಭದ ವಿಶೇಷ ಅತಿಥಿಗಳಾಗಿ ಆಗಮಿಸಿದ ಡಾ.ರಾಣಿಸತೀಶ್ ಮಾಜಿ ಸಚಿವರು, ಕನ್ನಡ ಸಂಸ್ಕೃತಿ ಇಲಾಖೆ. ಕರ್ನಾಟಕ. ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷರಾದ ಶ್ರೀಮತಿ ವನಮಾಲ ಅವರಿಗೆ ಮತ್ತು ಈ ದಿನ ಭಾಗವಹಿಸಲು ಆಗಮಿಸಿರುವ ರಾಜ್ಯದ ಎಲ್ಲಾ ಆಸಕ್ತರಿಗೆ ಹಾಗೂ ಮಾಧ್ಯಮದವರಿಗೆ ಸ್ವಾಗತವನ್ನು  ಯಾವುದೇ ಕಾರ್ಯವನ್ನು ಪ್ರಾರಂಭಿಸುವ ಮುನ್ನ ಪ್ರಾರ್ಥಿಸುವುದು ನಮ್ಮ ಸನಾತನದಿಂದ ಬಂದಂತಹ ಪದ್ಧತಿ ಈ ಸಮಾರಂಭದ ಪ್ರಾರ್ಥನೆಗೀತೆಯನ್ನು ಕರ್ನಾಟಕ ಲೇಖಕಿಯರ ಸಂಘದ ಸದಸ್ಯರಾದ ಜ್ಯೋತ್ತಿ ಶಶಿಕುಮಾರ್ ಸುಶ್ರಾವ್ಯವಾದ ಹಾಡನ್ನು ಹಾಡುವ ಮೂಲಕ ನಡೆಸಿಕೊಟ್ಟರು. ನಂತರ ದೀಪ ಪ್ರಜ್ವಾಲನೆಯ ಮೂಲಕ ಕಾರ್ಯಕ್ರಮವು ಉದ್ಘಾಟಿತಗೊಂಡಿತು.



ಅನಂತರ "ಅಕ್ಕಮಹಾದೇವಿ" ಕೃತಿಯ ಪರಿಚಯವನ್ನು ಡಾ. ಬಸವರಾಜ ಸಾದರ ಅವರು ಅನೇಕ ವಚನಗಳನ್ನು ಉದಾಹರಿಸುತ್ತಾ ತನ್ನ ಬದುಕನ್ನು ತನ್ನ ಆತ್ಮಕ್ಕನುಗುಣವಾಗಿ ಬದುಕಿದ. ಸಮಾಜದ ರೀತಿ ರಿವಾಜುಗಳನ್ನು ಪ್ರಶ್ನಿಸುತ್ತಾ  ಸ್ತ್ರೀ ಕ್ರಾಂತಿಯ ಹರಿಕಾರಳು ಅಕ್ಕಮಹಾದೇವಿ ಎಂದು ತಮ್ಮ ವಾಗ್ಝರಿಯಿಂದ ಅತ್ಯಂತ ವಿವರಣಾತ್ಮಕವಾಗಿ ನೀಡಿದರು.

ಅನಂತರ "ಅಕ್ಕ ಮಹಾದೇವಿ" ಸಂಸ್ಕೃತ ಭಾಷೆಯಲ್ಲಿ ಅನುವಾದಿಸಿರುವ ರಾಷ್ಟ್ರಪತಿ ಪ್ರಶಸ್ತಿ ಪುರಸ್ಕೃತರಾದ ಡಾ.ಎಚ್.ವಿ ನಾಗರಾಜರಾವ್ ಅವರು ಸಂಸ್ಕೃತ ಭಾಷೆಯಲ್ಲಿ ಆಶುಕವಿತೆಯನ್ನು ಹೇಳಿ ತಮ್ಮ ಅನುಭವಗಳನ್ನು ಹಂಚಿಕೊಂಡರು. ಅನಂತರ ಅವರಿಗೆ



ಕಸಂವಿ ಮತ್ತು ಕರ್ನಾಟಕ ಲೇಖಕಿಯರ ಸಂಘದ ವತಿಯಿಂದ ಹಾರ ಶಾಲು ಹೊದಿಸಿ ಸನ್ಮಾನಿಸಿದರು. ಮಧ್ಯಾಹ್ನದ ಕಾರ್ಯಕ್ರಮವಾದ "ಮಹಿಳಾ ಗೋಷ್ಠಿ"ಯಲ್ಲಿ ಪ್ರಪ್ರಥಮವಾಗಿ "ಮಹಿಳೆ ಮತ್ತು ಅಭಿವ್ಯಕ್ತಿ" ಎಂಬ ವಿಷಯವನ್ನಾಧರಿಸಿ ಡಾ. ಸಂಧ್ಯಾರೆಡ್ಡಿಯವರು ಮಹಿಳೆಯ ಅಭಿವ್ಯಕ್ತಿ ಹೆಚ್ಚು ಹೆಚ್ಚು ತನ್ನ ಮನೆ , ಮಗು ಸಂಬಂಧಗಳನ್ನೇ ಹೇಳುತ್ತವೆ ಎಂದು ಪ್ರತ್ಯೇಕಿಸುವುದು ಸರಿಯಲ್ಲ. ಅಭಿವ್ಯಕ್ತಿಕರಣದಲ್ಲಿ ಪುರುಷ ಸ್ತ್ರೀ ಎಂಬ ತಾರತಮ್ಯ ಸಲ್ಲದು ಎಂದು ತಿಳಿಸಿದರು ಪ್ರಸಿದ್ಧ ಮಹಿಳಾ ಅಭಿವ್ಯಕ್ತಿ ಕೃತಿಗಳನ್ನು ಉದಾಹರಿಸಿದರು.

ಅನಂತರ "ಮಹಿಳೆ ಮತ್ತು ಕಾನೂನು" ಎಂಬ ವಿಷಯವನ್ನಾಧರಿಸಿ ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಮಾಜಿ ಅಧ್ಯಕ್ಷರಾದ ಮಹಿಳಾ ಪರ ಹೋರಾಟಗಾರರಾದ ಶ್ರೀಮತಿ ಮಂಜುಳ ಮಾನಸ ಅವರು ಸಮಸ್ಯೆ ಎದುರಾದಾಗ ಮಾತ್ರ ಕಾನೂನಿನ ನೆರವನ್ನು ಪಡೆಯುವ ಬದಲು ಕಾನೂನನ್ನು ಸ್ವಲ್ಪಮಟ್ಟಿಗಾದರೂ ತಿಳಿದಿರುವುದು ಒಳ್ಳೆಯದು. ಧಾರ್ಮಿಕವಾಗಿ ಸಮಾನತೆಯನ್ನು ಸುಪ್ರೀಂಕೋರ್ಟ್‌ನಲ್ಲಿ ಹೋರಾಡಿ ಪಡೆದಿರುವುದು ಕಾನೂನಿನ ಮಹತ್ವವನ್ನು ತಿಳಿಸುತ್ತದೆ. ಮಹಿಳೆಯರು ತಮ್ಮ ಸಮಸ್ಯೆಗಳಿಗೆ ಬರೀ ಕಾನೂನನ್ನು ಆಶ್ರಯಿಸುವ ಬದಲು ಈ ರೀತಿಯ ವಿಚಾರ ಮಂಥನಗಳಿಂದ ಅರಿವನ್ನು ಹಾಗೂ ಜಾಗೃತಿಯನ್ನು ಪಡೆಯಬೇಕು ಎಂದು ಮಹ್ಹಿಳೆಯರಿಗೆ ಕಿವಿಮಾತನ್ನು ಹೇಳಿದರು. ನಂತರ ಡಾ.ಲೀಲಾಸಂಪಿಗೆಯವರು "ಮಹಿಳಾಶೋಷಣೆಗಳ ಸ್ವರೂಪಗಳು" ಎಂಬ ವಿಷವನ್ನಾಧರಿಸಿ ಮಹಿಳೆಯರ ಮೇಲಿನ ಕ್ರೌರ್ಯಗಳ ಹತ್ತು ಹಲವಾರು ಜ್ವಲಂತ ಘಟನೆಗಳನ್ನು ಹೇಳುವ ಮೂಲಕ ತಿಳಿಸಿದರು. ನಂತರ ಭಾಗವಹಿಸಿದವರು ಅನೇಕ ಪ್ರಶ್ನೆಗಳನ್ನು ಕೇಳಿದರು ಅವುಗಳಿಗೆ ಸೂಕ್ತ ಉತ್ತರಗಳನ್ನು ಸಂಪನ್ಮೂಲ ವ್ಯಕ್ತಿಗಳು ನೀಡಿದರು. ಕಾರ್ಯಕ್ರಮದ ಅಧ್ಯಕ್ಷರಾದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ. ಪದ್ಮಾಶೇಖರ್ ಅವರು ವಂದನಾರ್ಪಣೆಯನ್ನು ನಡೆಸಿಕೊಡುತ್ತಾ ಮಹಿಳೆ ತನ್ನ ಚಾರಿತ್ರ್ಯಶುದ್ಧಿ, ಆತ್ಮವಿಶ್ವಾಸ ಗುಣಗಳನ್ನು ಮೈಗೂಡಿಸಿ ಕೊಂಡು ಮುಂದೆ ಸಾಗಬೇಕು ಎಂದು ಮಹಿಳೆಯರಿಗೆ ಕಿವಿಮಾತನ್ನು ಹೇಳಿದರು.

ಸಂಪನ್ಮೂಲ ವ್ಯಕ್ತಿಗಳ ಪರಿಚಯವನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಯೋಜನಾ ಸಹಾಯಕರಾದ ಡಾ. ಶಕುಂತಲಾ ಭಟ್ ಅವರು ಮಾಡಿಕೊಟ್ಟರು. ಈ ಕಾರ್ಯಕ್ರಮದ ನಿರೂಪಣೆಯನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಯೋಜನಾ ಸಹಾಯಕರಾದ ವಿದುಷಿ ಜ್ಯೋತಿ ಅವರು ನಡೆಸಿ ಕೊಟ್ಟರು

# ವಿಶ್ವವಿದ್ಯಾಲಯದ ವತಿಯಿಂದ ಪ್ರಥಮ ಬಾರಿಗೆ 7ನೇ ಘಟಿಕೋತ್ಸವದಲ್ಲಿ ನಾಲ್ಕು ಸಂಶೋಧನಾ ವಿದ್ಯಾರ್ಥಿಗಳಿಗೆ ವಿದ್ಯಾವಾರಿಧಿ (ಪಿಹೆಚ್.ಡಿ) ಪದವಿ ಪ್ರದಾನ

ವರದಿ: **ವಿದ್ವಾನ್. ಗಿರೀಶ್ ಭಟ್**
**ಸಂಶೋಧನಾ ಸಹಾಯಕರು, ಕಸಂವಿ**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಸಂಶೋಧನಾ ಕಾರ್ಯವನ್ನು ಕೈಗೊಂಡು ಶೋಧಪ್ರಬಂಧ ವನ್ನು ಮಂಡಿಸಿದ ನಾಲ್ಕು ಸಂಶೋಧನಾ ವಿದ್ಯಾರ್ಥಿಗಳಿಗೆ 7ನೇ ಘಟಿಕೋತ್ಸವದಲ್ಲಿ **ಉಪಕುಲಾಧಿಪತಿಗಳು ಮತ್ತು ಉನ್ನತ ಶಿಕ್ಷಣ ಸಚಿವರು** ಆದ ಮಾನ್ಯ **ಶ್ರೀ ಜಿ.ಟಿ.ದೇವೇಗೌಡರು** ವಿದ್ಯಾವಾರಿಧಿ (ಪಿಹೆಚ್.ಡಿ) ಪದವಿ ಪ್ರದಾನ ಮಾಡಿದರು. **ಶ್ರೀ ಎಮ್.ಸಿ. ನಾಗರಾಜ** ಅವರು **ಪ್ರೊ. ವಿ. ಗಿರೀಶ್‌ಚಂದ್ರ** ಅವರ ಮಾರ್ಗದರ್ಶನದಲ್ಲಿ "ಗಜಶಾಸ್ತ್ರಗ್ರಂಥಾನಾಂ ತೌಲನಿಕಮಧ್ಯಯನಂ" ಎಂಬ ವಿಷಯದ ಮೇಲೆ ಶೋಧಕಾರ್ಯವನ್ನು ಕೈಗೊಂಡಿರುತ್ತಾರೆ. **ಶ್ರೀ ವಿಘ್ನೇಶ್ವರ ಭಟ್ಟ** ಇವರು **ಡಾ. ಮಂಜುನಾಥ ಭಟ್ಟ** ಅವರ ಮಾರ್ಗದರ್ಶನದಲ್ಲಿ "ಅನ್ನಂಭಟ್ಟಕೃತಾಯಾಃ ತಂತ್ರವಾರ್ತಿಕ ವ್ಯಾಖ್ಯಾಯಾಃ ಸುಬೋಧಿನ್ಯಾ ಏಕಮಾತೃಕಾಶ್ರಯಂ ಸಂಪಾದನಂ ಅಧ್ಯಯನಂ ಚ" ಎಂಬ ಶೋಧ ಪ್ರಬಂಧವನ್ನು ಮಂಡಿಸಿರುತ್ತಾರೆ. ಮೀಮಾಂಸಾಶಾಸ್ತ್ರಕ್ಕೆ ಸಂಬಂಧಪಟ್ಟ ಈ ಶೋಧಪ್ರಬಂಧದ ವಿಶೇಷತೆ ಯೇನೆಂದರೆ ತಂತ್ರವಾರ್ತಿಕಕ್ಕೆ ಅನ್ನಂಭಟ್ಟನು ಬರೆದ ಸುಬೋಧಿನೀ ವ್ಯಾಖ್ಯಾನದ ಉಪಲಬ್ಧವಿರುವ ಏಕಮಾತ್ರ ಹಸ್ತಪ್ರತಿಯ ಅಧ್ಯಯನ ಮತ್ತು ಸಂಪಾದನಾ ಕಾರ್ಯ ನಡೆದಿರುವುದರಿಂದ ಇದು ಪ್ರಕಾಶನ ಯೋಗ್ಯವಾದ ಗ್ರಂಥ ಎಂದು ಬಾಹ್ಯಪರೀಕ್ಷಕರಾಗಿ ಆಗಮಿಸಿದ ವಿಷಯತಜ್ಞರು ಹರ್ಷಪೂರ್ವಕವಾಗಿ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. **ಶ್ರೀ ಉದ್ದಣ್ಣ ಕೆ.ಇ.** ಅವರು **ಡಾ. ವಿನಾಯಕ ನಾಮಣ್ಣವರ** ಅವರ ಮಾರ್ಗದರ್ಶನದಲ್ಲಿ "ಪಂಡಿತರಾಜ ಜಗನ್ನಾಥ ವಿರಚಿತಸ್ಯ ಲಹರೀಪಂಚಕಸ್ಯ ವಿಮರ್ಶಾತ್ಮಕ ಮಧ್ಯಯನಂ" ಎಂಬ ವಿಷಯದ ಮೇಲೆ ಶೋಧಕಾರ್ಯವನ್ನು ಕೈಗೊಂಡಿರುತ್ತಾರೆ. ವೇದ, ಪುರಾಣ, ಇತಿಹಾಸ ಗ್ರಂಥಗಳಲ್ಲಿ ಉಲ್ಲೇಖಿತವಾದ ವಿಷಯಗಳನ್ನು ಸಂಗ್ರಹಿಸಿ ಲಹರೀ ಪಂಚಕವನ್ನು ವಿಮರ್ಶಿಸಲಾಗಿದೆ ಮತ್ತು ಅಲಂಕಾರಶಾಸ್ತ್ರ ದೃಷ್ಟಿಯಿಂದ ರಸ, ಭಾವ, ಅಲಂಕಾರ, ಗುಣಾದಿಗಳನ್ನು ಸಹ ವಿಮರ್ಶಿಸಲಾಗಿದೆ. **ಶ್ರೀಮತಿ ಕವಿತಾ ಭಟ್ಟ** ಅವರು **ಡಾ.ವಿನಾಯಕ ನಾಮಣ್ಣವರ** ಅವರ ಮಾರ್ಗದರ್ಶನ ದಲ್ಲಿ "ನೈಷಧಮಹಾಕಾವ್ಯಸ್ಯ ಗಾಗಾಭಟ್ಟ ವಿರಚಿತಾಯಾಃ ಪ್ರಥಮಸರ್ಗಾತ್ ಸಪ್ತಮಸರ್ಗಪರ್ಯಂತಂ ಪಾಠಸಮೀಕ್ಷಾತ್ಮಕ ಮಧ್ಯಯನಂ" ಎಂಬ ವಿಷಯದ ಮೇಲೆ ಶೋಧಕಾರ್ಯವನ್ನು ಕೈಗೊಂಡಿರುತ್ತಾರೆ.ಇದು ಅಪ್ರಕಟಿತಗ್ರಂಥದ ಸಂಪಾದನೆ ಮತ್ತು ಅಧ್ಯಯನವಾಗಿದ್ದು ಗಾಗಾಭಟ್ಟ ಮತ್ತು ಮಲ್ಲಿನಾಥನ ವ್ಯಾಖ್ಯಾನಗಳಿಗೆ ಇರುವ ಸಾಮ್ಯತೆ ಹಾಗೂ ಭಿನ್ನತೆಗಳನ್ನು ಮತ್ತು ಕೆಲವು ಪಾಠಭೇದಗಳನ್ನು ತಿಳಿಸಲಾಗಿದೆ. ಅಲಂಕಾರಶಾಸ್ತ್ರ ದೃಷ್ಟಿಯಿಂದ ಸಹ ಹಲವು ವಿಷಯಗಳನ್ನು ವಿಮರ್ಶಿಸಲಾಗಿದೆ.